ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 | ಸಂಚಿಕೆ 11 | ಮೇ 27, 1979 | 40 ಪೈಸೆ

ತಂಜಾವೂರಿಂದ ಇನ್ನೆತ್ತ?

ಚಿಕ್ಕಮಗಳೂರು ಲೋಕಸಭಾ ಉಪಚುನಾವಣೆಯಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಗೆದ್ದೂ ಸೋತಿದ್ದರು. ಇಂದಿರಾಗಾಂಧಿಯವರಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಲೋಕಸಭಾ ಸ್ಥಾನಕ್ಕೆ ರಾಜಿನಾಮೆ ಇತ್ತು ಸ್ಥಾನ ತೆರವು ಮಾಡಿದ್ದ ಶ್ರೀ ಚಂದ್ರೇಗೌಡರಷ್ಟೂ ಶೇಕಡಾವಾರು ಮತ ಪಡೆಯದಿದ್ದುದು ಇಂದಿರಾಗಾಂಧಿಯವರಿಗೆ ಗೆದ್ದರೂ ನಿಜವಾದ ಉತ್ಸಾಹ ನೀಡಲಿಲ್ಲ. ತನ್ನ ವ್ಯಕ್ತಿತ್ವ, ಪ್ರಭಾವಗಳೆಲ್ಲಾ ನಶಿಸಿ ಹೋಗುತ್ತಲಿರುವುದರ ಅರಿವಾದುದೂ, ಶ್ರೀ ದೇವರಾಜ ಅರಸು ಅವರು "ಯಾರೂ ನಿಂತಿದ್ದರೂ ಇಷ್ಟು ಮತ ಬರುತ್ತಿತ್ತೆಂದು" ಘಂಟಾಘೋಷವಾಗಿ ಹೇಳಿದ್ದೂ-ಇವೆಲ್ಲಾ ಇಂದಿರಾಗಾಂಧಿ ಗೆದ್ದರೂ ಒಳಗಿಂದೊಳಗೆ ಸೋಲಿನ ಮನೋಭಾವನೆ ಇತ್ತುವು. ಲೋಕಸಭೆಯಿಂದ ಉಚ್ಚಾಟನೆ ಮಾಡಿದ್ದರ ಪರಿಣಾಮ ಗೆದ್ದು ಸೋತಂತಾಯಿತು. ತನ್ನ ಉಚ್ಚಾಟನೆ, ಬಂಧನಗಳನ್ನು ಉಪಯೋಗಿಸಿ, ಮತ್ತೆ ವ್ಯಕ್ತಿತ್ವವನ್ನು ಬೆಳೆಸಲು ಮಾಡಿದ ಪ್ರಯತ್ನಗಳಿಂದ ಪ್ರಯೋಜನ ದೊರೆವ ಬದಲು, ತನ್ನ ಪಕ್ಷದಲ್ಲೆ ಒಡಕು ಹುಟ್ಟಿಕೊಂಡಿತು.

ತನ್ನ ಸರ್ವಾಧಿಕಾರದ ಮಹತ್ವಾಕಾಂಕ್ಷೆಯಿಂದಿರುವ ಇಂದಿರಾಗಾಂಧಿಯವರಿಗೆ ಹೇಗಾದರೂ, ಎಲ್ಲಿಂದಲಾದರೂ ಲೋಕಸಭೆಗೆ ಆಯ್ಕೆಯಾಗಿ ಹೋಗುವ ಆಸೆ. ಉತ್ತರ ಭಾರತದಲ್ಲಿ ಚುನಾವಣೆ ಸರಿಯಾಗಿ ನಡೆಯಲಾರದು

ಸಂಪಾದಕೀಯ

ಎಂಬ ಕಾರಣದಿಂದ ಅಲ್ಲೆಲ್ಲೂ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದಿರುವ ಇಂದಿರಾ ದಕ್ಷಿಣ ಭಾರತದಲ್ಲಿ ತನಗನುಕೂಲವಾದ ಸ್ಥಾನವನ್ನು ಹುಡುಕುತ್ತಾ ಬಂದಿರುವರು. ತಂಜಾವೂರು ಕ್ಷೇತ್ರದಲ್ಲಿ ತಮಿಳುನಾಡು ಮುಖ್ಯ ಮಂತ್ರಿ ಶ್ರೀ ಎಂ.ಜಿ. ರಾಮಚಂದ್ರನ್ ಅವರ ಪಕ್ಷದ ಬೆಂಬಲದಲ್ಲಿ ಸ್ಪರ್ಧಿಸಿ ಗೆಲ್ಲುವ ಆಸೆಯಿದ್ದದ್ದೂ ಈಗ ನುಚ್ಚುನೂರಾಗಿದೆ. ಇಂದಿರಾಗಾಂಧಿ ತಂಜಾವೂರು ಕ್ಷೇತ್ರದಿಂದ ಸ್ಪರ್ಧಿಸುವ ಬಗ್ಗೆ ತಂಜಾವೂರಿನವರೇ ಆದ ಇಂದಿರಾ ಕಾಂಗ್ರೆಸ್ಸಿನ ಮುಂದಾಳು ಕುರುಪ್ಪಯ್ಯ ಮೂಪನಾರ್ ಅವರಂತವರಿಗೇ ಆಸಕ್ತಿಯಿದ್ದಿಲ್ಲ. ಎಲ್ಲಾ ವಿರೋಧ ಪಕ್ಷಗಳ ಅಭ್ಯರ್ಥಿಯಾಗಿ ಡಿ. ಎಮ್. ಕೆ. ಯ ಕರುಣಾನಿಧಿಯಂತವರು ಇಂದಿರಾಗೆ ಇದಿರಾಗಿ ನಿಂತಿದ್ದರೆ, ಇಂದಿರಾಗಾಂಧಿ ಗೆಲ್ಲುವ ಭರವಸೆಯೂ ಇದ್ದಿಲ್ಲ. ಜನಾಭಿಪ್ರಾಯ ಮತ್ತು ಈ ರೀತಿಯ ಲೆಕ್ಕಾಚಾರಗಳನ್ನು ಹಾಕಿ. ಮುಳುಗುತ್ತಿರುವ ದೋಣಿಯಲ್ಲಿ ಕಾಲಿಡುವುದು ಬೇಡ ಎಂದು ರಾಮಚಂದ್ರನ್ ಅವರೂ ಕೊನೆಗಳಿಗೆಯಲ್ಲಿ ಹಿಂದೇಟು ಹಾಕಿದ್ದಿರಬಹುದು. ಏನೇ ಇದ್ದರೂ, ಇಂದಿರಾಗಾಂಧಿ ಮತ್ತೆ ಇನ್ನೊಂದು ಸ್ಥಾನವನ್ನು ಹುಡುಕುವಂತಾಗಿದೆ.

ಈ ಹಿನ್ನೆಲೆಯಲ್ಲಿ ಚಿಕ್ಕಮಗಳೂರು ಸ್ಥಾನ ಇಂದಿರಾರದ್ದೆ ಎಂಬುದಾಗಿ ದೇವರಾಜ ಅರಸು ಅವರು ಸಾರಿದ್ದಾರೆ. ಅರಸು ಅವರನ್ನು ಇಂದಿರಾಗಾಂಧಿ ನಂಬುವುದಂತೂ ಈಗಷ್ಟು ಸುಲಭವಲ್ಲ. ದಕ್ಷಿಣ ಭಾರತದಲ್ಲಿ ಕೇರಳ ತನಗೆ

[ಕೊನೆಯ ಪುಟ ನೋಡಿ]

ಕೇರಳ ಉಪಚುನಾವಣಾ ಫಲಿತಾಂಶ

ವಿರೋಧ ರಂಗದ ಪ್ರಚಂಡ ವಿಜಯ

ಮೇ 17ರಂದು ಕೇರಳ ರಾಜ್ಯದ ತಲಚ್ಚೇರಿ, ತಿರುವಲ್ಲ, ಕಾಸರಗೋಡು ಮತ್ತು ಪಾರಶ್ಶಾಲೆಗಳಲ್ಲಿನ ನಾಲ್ಕು ಅಸೆಂಬ್ಲಿ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ನಾಲ್ಕು ಸ್ಥಾನಗಳನ್ನು ಗೆದ್ದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ವಿರೋಧ ರಂಗವು ಪ್ರಚಂಡ ವಿಜಯವನ್ನು ಸಾಧಿಸಿದೆ. ತಲಚ್ಚೇರಿ ಮತ್ತು ಪಾರಶ್ಶಾಲೆ ಕ್ಷೇತ್ರಗಳಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಉಮೇದುವಾರರುಗಳಾದ ಕಾಂ. ಎಂ. ವಿ. ರಾಜಗೋಪಾಲನ್ ಮತ್ತು ಕಾಂ. ಸತ್ಯನ್ನೇಷನ್ ಆಯ್ಕೆಯಾದರೆ ತಿರುವಲ್ಲದಿಂದ ಜನತಾಪಕ್ಷದ ಶ್ರೀ ಪಿ. ಸಿ. ಥೋಮಸ್‌ರವರೂ, ಕಾಸರಗೋಡಿನಿಂದ ಬಂಡುಗಾರ ಮುಸ್ಲಿಮ್ ಲೀಗಿನ ಶ್ರೀ. ಬಿ.ಎಮ್. ಅಬ್ದುಲ್ ರಹಿಮಾನ್ ರವರೂ ಆಯ್ಕೆಯಾಗಿದ್ದಾರೆ. ರಾಷ್ಟ್ರದಾದ್ಯಂತ ಕುತೂಹಲ ಕೆರಳಿಸಿದ್ದ ಈ ಉಪಚುನಾವಣೆಯು ಕೇರಳದ ಆಳುವ ರಂಗಕ್ಕೆ ಪ್ರಬಲ ಒದೆತವನ್ನಿತ್ತಿದೆ. ತಿರುವನಂತಪುರ ಉಪಚುನಾವಣೆಯಲ್ಲಿ ಆಳುವ ರಂಗಕ್ಕೆ ಸೋಲಾಗಿದ್ದ ಹಿನ್ನೆಲೆಯಲ್ಲಿ, ಸದ್ಯದ ಉಪಚುನಾವಣೆಯ ಫಲಿತಾಂಶ ಜನರ ಬೆಂಬಲ ಮತ್ತು ಒಲವು ಎತ್ತ ವಾಲುತ್ತಿದೆ ಎಂಬುದರ ಸ್ಪಷ್ಟ ಕುರುಹಾಗಿದೆ.

ಆಳುವ ರಂಗದವರು ಏನೇ ಕಾರಣ ಮತ್ತು ಉದಾಹರಣೆಗಳನ್ನಿತ್ತರೂ, ಹಿಂದೆ ತಲಚ್ಚೇರಿಯ ಹೊರತು ಉಳಿದ ಮೂರು ಸ್ಥಾನಗಳಲ್ಲಿ ಗದ್ದಿದ್ದ ಆಳುವ ರಂಗ ಇಂದು ಜನಬೆಂಬಲ ಕಳಕೊಂಡುದು ಓಟಿನ ಲೆಕ್ಕಾಚಾರದಿಂದ ಸ್ಪಷ್ಟ. 1977 ರ ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಉಮೇದುವಾರ 8,587 ಮತಗಳಿಂದ ಗೆದ್ದಿದ್ದರೆ, ಈ ಬಾರಿ 20,680 ರಷ್ಟು ಬಹುಮತದಿಂದ ಗೆದ್ದಿರುವರು. 1977ರ ಚುನಾವಣೆಯಲ್ಲಿ ಪಾರಶ್ಶಾಲೆಯಲ್ಲಿ ಪ್ರತಿಪಕ್ಷಗಳ ಉಮೇದುವಾರ 14,401 ಮತಗಳಿಂದ ಸೋತಿದ್ದರೆ, ಈ ಭಾರಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿ 7,209 ಮತಗಳಷ್ಟು ಬಹುಮತ ಪಡೆದು ಗೆದ್ದಿರುವರು. ಪಾರಶ್ಶಾಲೆ ಕ್ಷೇತ್ರದಲ್ಲಿ ಗೆಲ್ಲುವುದಕ್ಕಾಗಿ ಆಳುವ ರಂಗದ ಮಂತ್ರಿಗಳೂ ಇದ್ದು ನೀರಿನಂತೆ ಹಣವನ್ನು ಹಂಚಿದರೂ, ಪ್ರತಿಪಕ್ಷಗಳ ಬೆಂಬಲಿತ ಅಭ್ಯರ್ಥಿ ಗೆಲ್ಲುವಂತಾಯಿತು.

ಆಳುವ ರಂಗವು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಜನಬೆಂಬಲವಿಲ್ಲವೆಂದು ನಡೆಸುತ್ತಿದ್ದ ಅಪಪ್ರಚಾರಕ್ಕೆ ಕೇರಳದ ಉಪಚುನಾವಣೆಯ ಫಲಿತಾಂಶವು ಉತ್ತರವನ್ನಿತ್ತಿದೆ. ಜನಾಭಿಪ್ರಾಯವು ತಮಗೆ ವಿರೋಧವಾಗಿದೆ ಎಂಬುದನ್ನು ಅರಿತೆ ಆಳುವ ರಂಗವು ಪಂಚಾಯತ್ ಚುನಾವಣೆಗಳನ್ನು ನಡೆಸುತ್ತಿಲ್ಲ ಎಂಬುದೂ ಸ್ಪಷ್ಟವಾಗಿದೆ. ಉಪಚುನಾವಣಾ ಫಲಿತಾಂಶದ ಪರಿಣಾಮವಾಗಿ ಆಳುವ ರಂಗಕ್ಕೆ ಅಧಿಕಾರದಲ್ಲಿರಲು ನೈತಿಕ ಹಕ್ಕಿಲ್ಲ ಎಂಬುದಾಗಿ ಜನತೆಯೂ, ಬೇರೆ ಬೇರೆ ರಾಜಕೀಯ ಪಕ್ಷಗಳು ಹೇಳುತ್ತಲಿವೆ. ಆಳುವ ರಂಗದೊಳಗೆ ಬೆಳೆದು ಬರುತ್ತಲಿದ್ದ ಬಿಕ್ಕಟ್ಟು ಈಗಂತೂ ತೀವ್ರವಾಗಲಿದೆ. ಕೇರಳದ ರಾಜಕೀಯದಲ್ಲಿ ತೀವ್ರ ಬದಲಾವಣೆಗಳಾಗುವ ಸಂಭವವಿದೆ. ●

ಮೇ 17 ರ ಸಭೆಯಲ್ಲಿ ಪಾಲಿಟ್‌ಬ್ಯೂರೋ ಮಂಡಿಸಿದ ಅಭಿಪ್ರಾಯ

ಮಧುಲಿಮಯೆ ಅವರು ಕರೆದಿರುವ ಮೇ 17ರ ಸಭೆಯ ಬಗ್ಗೆ ಮೊದಲಿನ ತಿಳುವಳಿಕೆಗೆ ವಿರುದ್ಧವಾಗಿ ಪತ್ರಿಕೆಗಳ ಪ್ರಚಾರ ಪಡೆದಿದೆ. ಲಿಮಯೆ ಅವರು ಆಹ್ವಾನಿತರಿಗೆ ಬರೆದ ಪತ್ರದಲ್ಲಿ "ಅನೌಪಚಾರಿಕ ವಿನಿಮಯ" ಎಂದು ಕರೆದಿದ್ದ ಅಂಶವು ಈಗ ಇಲ್ಲವಾಗಿದೆ. ಆದ್ದರಿಂದ ಈ ವಿನಿಮಯದಲ್ಲಿ ಭಾಗವಹಿಸುವ ಸ್ನೇಹಿತರ ಮುಂದೆ ನಮ್ಮ ಅಭಿಪ್ರಾಯಗಳನ್ನು ತಿಳಿಸುವುದು ಅಗತ್ಯ ಎಂದು ನಾವು ಭಾವಿಸುತ್ತೇವೆ.

(1) ಕೆಲವು ವಿಶೇಷ ವಿಚಾರಗಳ ಬಗ್ಗೆ ಐಕ್ಯತೆಯಿಂದ ಕಾರ್ಯಾಚರಣೆ ಮಾಡಲು ಟ್ರೇಡ್‌ಯೂನಿಯನ್‌ಗಳು ಮತ್ತಿತರ ಸಾಮೂಹಿಕ ಸಂಘಟನೆಗಳು ಹೆಚ್ಚುಹೆಚ್ಚಾಗಿ ಮುಂದೆ ಬರುತ್ತಿರುವುದು ಮತ್ತು ವಿವಿಧ ಸಂಘಟನೆಗಳಿಗೆ ನೀತಿಯ ಬಗ್ಗೆ ಇರುವ ಭಿನ್ನಾಭಿಪ್ರಾಯಗಳು ಇಂಥ ಐಕ್ಯಕಾರ್ಯಾಚರಣೆಗೆ ಅಡ್ಡಿ ಬಾರದಿರುವುದು ಸ್ವಾಗತಾರ್ಹ ಬೆಳವಣಿಗೆ ಎಂದು ನಾವು ಭಾವಿಸುತ್ತೇವೆ. ಈಗ ಹೆಚ್ಚ ಕಡಿಮೆ ಇಂಥವುಗಳೆಲ್ಲ, ಕಾರ್ಮಿಕವರ್ಗ, ರೈತಜನಾಂಗಗಳ ಆರ್ಥಿಕ ವಿಚಾರಗಳಿಗೆ ಮಾತ್ರ ಸೀಮಿತವಾಗಿದ್ದು. ರಾಜಕೀಯ ವಿಚಾರಗಳ ಬಗ್ಗೆಯೂ ಇಂಥದನ್ನು ನಡೆಸುವುದಕ್ಕೆ ಪರಿಸ್ಥಿತಿ ಅನುಕೂಲವಾಗಿ ಕಂಡುಬರುತ್ತಿದೆ. ಈ ಕ್ರಮವನ್ನು ಬಲಪಡಿಸುವುದು, ನಮ್ಮ ಪಕ್ಷದ ಪ್ರಯತ್ನವಾಗಿರುವ ಹಾಗೆಯೇ ನಮ್ಮೆಲ್ಲರ ಪ್ರಯತ್ನವೂ ಆಗಬೇಕು.

(2) ಸರ್ವಾಧಿಕಾರ ವಿರೋಧಿ, ಜಾತ್ಯಾತೀತ, ಶೀವ್ರವಾದಿ, ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಹೆಚ್ಚು ಹೆಚ್ಚಾಗಿ ಅನುಕೂಲಕರವಾಗುತ್ತಿರುವ ಒಂದು ರಾಜಕೀಯ ಸನ್ನಿವೇಶದ ಹಿನ್ನೆಲೆಯಲ್ಲಿ ಈ ಬೆಳೆಯುತ್ತಿರುವ ಐಕ್ಯಕಾರ್ಯಾಚರಣೆಗಳನ್ನು ಗಮನಿಸಬೇಕು. ಜನತಾ ಸರ್ಕಾರದ ಜನವಿರೋಧಿ ನೀತಿಗಳ ಬಗ್ಗೆ ಬೆಳೆಯುತ್ತಿರುವ ಜನತೆಯ ಅಸಮಾಧಾನವನ್ನು ಬಂಡವಾಳ ಮಾಡಿಕೊಳ್ಳಲು ಮತ್ತು ಅಧಿಕಾರಕ್ಕೆ ಪುನಃ ಬರಲು ಸರ್ವಾಧಿಕಾರ ಶಕ್ತಿಗಳ ನಾಯಕಿಯು ನಡೆಸಿದ ಪ್ರಯತ್ನಗಳನ್ನು ಜನತೆ ಮತ್ತು ಅವರ ಪಕ್ಷವೇ ವಿರೋಧಿಸುತ್ತಿದೆ. ಕಾಂಗ್ರೆಸ್ (ಐ)ನೊಡನೆ ಹೊಂದಾಣಿಕೆ ಮಾಡಿಕೊಳ್ಳಲು ಕಾಂಗ್ರೆಸ್‌ನಲ್ಲಿ ಕೆಲವರು ನಡೆಸಿದ ಪ್ರಯತ್ನಕ್ಕೂ ಬಲವಾದ ಪೆಟ್ಟು ಬಿದ್ದಿದೆ. ಜನತಾಪಕ್ಷದಲ್ಲಿ, ಅದರ ನಾಯಕರೊಳಗೆ ಇರುವ ಆಂತರಿಕ ಕಲಹಗಳು ಈಗ ನೀತಿಯ ಬಗೆಗಿನ ಕಲಹಗಳ ಸ್ವರೂಪ ಪಡೆಯುತ್ತಿವೆ.

(3) ಆದರೆ ಈ ರಾಜಕೀಯ ಬೆಳವಣಿಗೆಗಳ ಮೊತ್ತವನ್ನು ಉತ್ಪ್ರೇಕ್ಷೆ ಮಾಡಿ, ಒಂದು ತೃತೀಯ ರಂಗದ ಅಥವಾ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಒಂದು ಐಕ್ಯರಂಗದ ಉದಯಕ್ಕೆ ಪರಿಸ್ಥಿತಿ ಅನುಕೂಲಕರವಾಗಿದೆ ಎಂದು ಆಲೋಚಿಸುವುದು ತಪ್ಪಾಗುತ್ತದೆ. ಸರ್ಕಾರದ ನೀತಿಗಳು ತೀವ್ರವಾದಿ ಮತ್ತು ಪ್ರಜಾಪ್ರಭುತ್ವವಾದಿತಿರುವನ್ನು ಪಡೆಯಲಿ ಎಂದು ಮತ್ತು ಸರ್ವಾಧಿಕಾರದ ವಿರುದ್ಧ, ಜಾತ್ಯಾತೀತತೆಯ ಪರವಾಗಿ ಹೋರಾಡುತ್ತಿರುವ ವಿವಿಧ ಶಕ್ತಿಗಳ ನಡುವೆ ತೀವ್ರ ಭಿನ್ನಾಭಿಪ್ರಾಯಗಳಿವೆ. ಇವತ್ತಿನ ಅಭಿಪ್ರಾಯಗಳ ವಿನಿಮಯದಲ್ಲಿ ಭಾಗವಹಿಸುತ್ತಿರುವವರಲ್ಲಿ ಅನೇಕರು, ವಿವಿಧ ರಾಜ್ಯಗಳಲ್ಲಿ ವಿರುದ್ಧ ಗುಂಪುಗಳಿಗೆ ಸೇರಿದವರಾಗಿದ್ದಾರೆ. ಉದಾಹರಣೆಗೆ ಪಶ್ಚಿಮಬಂಗಾಳ ಮತ್ತು ತ್ರಿಪುರಾಗಳಲ್ಲಿ ನಮ್ಮ ಪಕ್ಷವು ವಾಮರಂಗ ಸರ್ಕಾರಗಳ ನೇತೃತ್ವ ವಹಿಸಿದೆ. ಆದರೆ ಈ ವಿನಿಮಯದಲ್ಲಿ ಭಾಗವಹಿಸುತ್ತಿರುವ ಅನೇಕರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ವಿರೋಧಿ ರಂಗವನ್ನು ಸ್ಥಾಪಿಸಲು ಯತ್ನಿಸುತ್ತಿದ್ದಾರೆ. ಕೇರಳದಲ್ಲಿ ನಾವು ವಿರೋಧಪಕ್ಷದಲ್ಲಿ ಇದ್ದೇವೆ. ಆದರೆ ಇಲ್ಲಿನ ನಮ್ಮ ಅನೇಕ ಸ್ನೇಹಿತರು ಆ ಸರ್ಕಾರದಲ್ಲಿ ಭಾಗವಹಿಸುತ್ತಿದ್ದಾರೆ. ಮಹಾರಾಷ್ಟ್ರದಲ್ಲಿ ನಾವು ಪವಾರ್ ಸರ್ಕಾರವನ್ನು ಬೆಂಬಲಿಸುತ್ತಿದ್ದೇವೆ. ಆದರೆ ಇಲ್ಲಿನ ಕೆಲವು ಸ್ನೇಹಿತರು ಅದನ್ನು ಸಂಪೂರ್ಣವಾಗಿ ವಿರೋಧಿಸುತ್ತಿದ್ದಾರೆ. ಪಂಜಾಬ್‌ನಲ್ಲಿಯೂ ನಾವು ಅಕಾಲಿ-ಜನತಾಸರ್ಕಾರವನ್ನು ಬೆಂಬಲಿಸುತ್ತೇವೆ. ಇಲ್ಲಿನ ಕೆಲವರು ಅದನ್ನು ವಿರೋಧಿಸುತ್ತಾರೆ. ಕೇಂದ್ರ ಸರ್ಕಾರದಲ್ಲಿಯೂ ಕೂಡ, ಇಲ್ಲಿನ ಕೆಲವು ಸ್ನೇಹಿತರ ನೀತಿಯು ಹಾಗೆ ನಮ್ಮ ನೀತಿ ಅದನ್ನು ಪೂರ್ಣ ವಿರೋಧಿಸುವಂಥದ್ದಲ್ಲ. ಈ ಭಿನ್ನಾಭಿಪ್ರಾಯ

[ಕೊನೆಯ ಪುಟ ನೋಡಿ]

ಮೈಕೋ ಕಾರ್ಮಿಕರ ಹೋರಾಟ

ಬೆಂಗಳೂರು ಕಾರ್ಮಿಕರ ಹೋರಾಟಕ್ಕೆ ಸ್ಫೂರ್ತಿ

(ಬಾಕಿ: ಮೈಕೋ ಕಾರ್ಮಿಕ)

ಪ್ಪ್ಯಾನಿ ಜರ್ಮನಿ ಬಂಡವಾಳಗಾರರು 27 ವರ್ಷಗಳ ಕೆಳಗೆ ಮೋಟಾರು ವಾಹನಗಳ ಉಪಕರಣಗಳನ್ನು ತಯಾರಿಮಾಡುವ ಕಾರ್ಖಾನೆಯೊಂದನ್ನು ಬೆಂಗಳೂರು ನಗರದ ಆಡುಗೋಡಿ ಬಡಾವಣೆಯಲ್ಲಿ ಸ್ಥಾಪಿಸಿರುವರು. ಈಗ ಈ ಕಾರ್ಖಾನೆ ಬೃಹತ್ ಕೈಗಾರಿಕೆಯಾಗಿ ಪ್ರಪಂಚದ ಎಲ್ಲೆಡೆ ಅದರ ಸರಕುಗಳ ಮಾರಾಟವಾಗುತ್ತಿವೆ. ದೇಶಕ್ಕೆ ಸ್ವಾತಂತ್ರ್ಯ ಬಂದು 31 ವರ್ಷ ಕಳೆದರೂ ವಿದೇಶಿಯರ ಸುಲಿಗೆ ನಿಂತಿಲ್ಲ. ಕೇವಲ ಕೆಲವು ಲಕ್ಷದ ಬಂಡವಾಳದಿಂದ ಆರಂಭವಾದ ಈ ಕಾರ್ಖಾನೆ ಅಪಾರ ಲಾಭ ಗಳಿಸಿ ಬೋನಸ್ ಷೇರ್ ಶೇಖರಣೆಯಿಂದಾಗಿ ಅದರ ಬಂಡವಾಳ ಈಗ 126 ದಶಲಕ್ಷಗಳಿಗಿಂತ ಹೆಚ್ಚಿದೆ. 1972ರಲ್ಲಿದ್ದ ಬಂಡವಾಳ 37 ದಶಲಕ್ಷ. ಅದು 1976ರ ಹೊತ್ತಿಗೆ 126 ದಶಲಕ್ಷಕ್ಕೆ ಏರಿದೆ. (ಹೊಸ ಬಂಡವಾಳ ಹೂಡದೆ ರಿಸರ್ವ್ ಫಂಡಿನಿಂದ ವರ್ಗಾಯಿಸಲ್ಪಟ್ಟ ಬೋನಸ್ ಷೇರ್‌ಗಳಿಂದ ಶೇಖರಿಸಿದ್ದಾಗಿದೆ). ಜನತಾ ಪಕ್ಷ ತನ್ನ ಚುನಾವಣಾ ಘೋಷಣೆಯಲ್ಲಿ ವರಮಾನದ ಅಂತರವನ್ನು ಹತ್ತು ವರ್ಷಗಳಲ್ಲಿ 1 : 10ಕ್ಕೆ ಇಳಿಸುತ್ತೇವೆ ಎಂದು ಹೇಳಿದ್ದರೂ ಈ ದಿಸೆಯಲ್ಲಿ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಮೈಕೋ ಕಂಪೆನಿಯ ಮ್ಯಾನೇಜಿಂಗ್ ಡೈರೆಕ್ಟರ್‌ರವರ ವಾರ್ಷಿಕ ವರಮಾನ 1977ನೇ ಬ್ಯಾಲೆನ್ಸ್‌ಷೀಟ್ ಪ್ರಕಾರವಾಗಿ 5½ ಲಕ್ಷ; ಆದರೆ ಕಾರ್ಮಿಕನ ವಾರ್ಷಿಕ ವರಮಾನ ಕೇವಲ 6000 (ಆರುಸಾವಿರ) ರೂಪಾಯಿಯಿಂದ 7000 ರೂಗಳು. ಅಂದರೆ 1 : 70 ಆಗುತ್ತದೆ. ದೇಶದ ಹಿತದೃಷ್ಟಿಯಿಂದ ಈ ಕಾರ್ಖಾನೆ ರಾಷ್ಟ್ರೀಕರಣವಾಗಬೇಕು.

ಮೈಕೋ ಕಾರ್ಖಾನೆಯ ಬೆಂಗಳೂರಿನ ವಿಭಾಗದಿಂದ ಒಂದುವರೆ ಸಹಸ್ರ ಜನ ಕೆಲಸ ಮಾಡುತ್ತಿದ್ದ ನಾಜಿಲ್ ವಿಭಾಗವನ್ನು ಮಹಾರಾಷ್ಟ್ರ ಪ್ರಾಂತದ ನಾಸಿಕ್‌ಗೆ 1970ನೆಯ ಇಸವಿಯಲ್ಲಿ ವರ್ಗಾಯಿಸಲು ಮ್ಯಾನೇಜ್‌ಮೆಂಟ್ ಹೊರಟಾಗ ಹಿಂದಿನ ಯೂನಿಯನ್ ಮುಖಂಡತ್ವ ಒಮ್ಮೆ ಗದ್ದಲ ಮಾಡಿದ್ದರ ಹೊರತು ಬೇರೇನೂ ಮಾಡಲಿಲ್ಲ. ಇದರಿಂದಾಗಿ ಒಂದು ಸಾವಿರದ ಐನೂರು ಕಾರ್ಮಿಕರನ್ನು ಮ್ಯಾನೇಜ್‌ಮೆಂಟ್ ಸರ್‌ಪ್ಲಸ್ (Surplus) ಎಂದು ಘೋಷಿಸಿ, ಸದರಿ ಕಾರ್ಮಿಕರು ಅನೇಕ ಕಷ್ಟನಷ್ಟಗಳನ್ನು ಅನುಭವಿಸುತ್ತಿದ್ದಾರೆ. ಅಲ್ಲಿಂದ ಈ ತನಕ ಅಪ್ರೆಂಟಿಸ್‌ಗಳನ್ನು ಬಿಟ್ಟು ಹೊಸ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸುತ್ತಿಲ್ಲ.

ಮ್ಯಾನೇಜ್‌ಮೆಂಟಿನ ವರ್ಕ್‌ಲೋಡ್ (workload) ಟೈಮ್‌ಮೋಷನ್ ಸ್ಟಡಿ (Time motion study) ಮೊದಲಾದ ವಿಷಯಗಳ ಬಗ್ಗೆ ಪ್ರತಿಭಟಿಸಲು ಹಿಂದಿನ ಮುಖಂಡತ್ವ ಯಾವ ಕ್ರಮವನ್ನು ತೆಗೆದುಕೊಳ್ಳದ ಕಾರಣ ಮಾಲೀಕರು ತಮಗೆ ಇಷ್ಟಬಂದಂತೆ ಮಾಡಲು ಸಾಧ್ಯವಾಯಿತು. 1956ರಲ್ಲಿ ಮಾಡಲ್ಪಟ್ಟ ಸ್ಟಾಂಡಿಂಗ್ ಆರ್ಡರ್ ಪ್ರಕಾರ ಮದುವೆಯಾದ ಹೆಣ್ಣುಮಕ್ಕಳು ಕೆಲಸ ಕಳೆದುಕೊಳ್ಳಬೇಕಾಗುತ್ತದೆ ಎಂದು ವಿಧಿಸಿದ್ದರು. ಸಸ್ಪೆನ್‌ಷನ್ ಅವಧಿಗೆ ಸಂಬಳ ಇಲ್ಲವೆಂದು ಹೇಳಿದ್ದರೂ ಇನ್ನೂ ಅನೇಕ ಕಾರ್ಮಿಕ ವಿರೋಧಿ ಅಂಶಗಳಿದ್ದರೂ ಅದನ್ನು ತಿದ್ದುಪಡಿಮಾಡಲು ಯಾವಕ್ರಮವನ್ನು ತೆಗೆದುಕೊಳ್ಳಲಿಲ್ಲ. ಇವುಗಳಿಂದಾಗಿ ಮ್ಯಾನೇಜ್‌ಮೆಂಟ್ ಮಾಡಿದ್ದೆ ಕಾನೂನು, ಆಡಿದ್ದೆ ಆಟವಾಗಿದೆ. ಉದಾಹರಣೆಗೆ:- ಖಾಯಿಲೆ ನಿಮಿತ್ತ ರಜ ತೆಗೆದುಕೊಂಡರೆ, ಅಪಘಾತಕ್ಕಿಡಾಗಿ ರಜಾ ತೆಗೆದುಕೊಂಡರೆ, ವಾರ್ಷಿಕ ಇನ್‌ಕ್ರಿಮೆಂಟ್ (ಬಡ್ತಿ) ಗದ್ದಾಗುತ್ತದೆ.

ಮೈಕೋ ಕಾರ್ಮಿಕರು ನಗರದ ನಾನಾ ಭಾಗಗಳಿಂದ ಕೆಲಸಕ್ಕೆ ಬರುತ್ತಾರೆ. ಈ ಕಾರ್ಮಿಕರಿಗೆ ಯಾವ ವಾಹನ ಸೌಲಭ್ಯವನ್ನು ಏರ್ಪಡಿಸಿಲ್ಲ. ಫ್ಯಾಕ್ಟರಿ ನಾಲ್ಕು ಷಿಫ್ಟ್‌ಗಳಲ್ಲಿ ಕೆಲಸ ಮಾಡುತ್ತಿದೆ. ಸಾರಿಗೆಯೊಂದರೆಯಿಂದಾಗಿ ಕೇವಲ ಒಂದು ಮತ್ತು ಎರಡು ನಿಮಿಷಗಳು ಹೊತ್ತಾಗಿ ಕಾರ್ಖಾನೆಗೆ ಕಾರ್ಮಿಕರು ಹೋದರೆ ಚಾರ್ಜ್‌ಷೀಟ್‌ಗಳು/ಷೋಕಾಸ್ ನೋಟೀಸು ಕೊಡಲಾಗುತ್ತಿದೆ. ಕಾರ್ಮಿಕರ ಯಾವ ಸಮಜಾಯಿಸಿ ಮಾಲೀಕರು ಒಪ್ಪುವುದಿಲ್ಲ. ಹೀಗಾಗಿ ಆರೇಳು ಸಾವಿರ ಪೈಕಿ ಶೇಕಡ ಐವತ್ತಕ್ಕು ಹೆಚ್ಚು ಕಾರ್ಮಿಕರು ಒಂದು ಅಥವಾ ಎರಡು ಸಾರಿ ಸಸ್ಪೆಂಡ್ ಮಾಡಲ್ಪಟ್ಟಿದ್ದಾರೆ. ಈ ಕಾರ್ಖಾನೆಯಲ್ಲಿ ಕೆಲಸದ ಭದ್ರತೆಯೆ ಇಲ್ಲಾವಾಗಿದೆ. ಈ ಹಿನ್ನೆಲೆಯಲ್ಲಿ 1979-80ರ ಸಾಲಿಗೆ C. I. T. U. ಅಧ್ಯಕ್ಷರಾದ ಕಾಂ. ಎಸ್. ಸೂರ್ಯನಾರಾಯಣರಾವ್‌ರವರು ಅಧ್ಯಕ್ಷರಾಗಿ ಕಾಂ. ನೀಲಕಂಠಯ್ಯ ಪ್ರಧಾನ ಕಾರ್ಯದರ್ಶಿಯಾಗಿರುವ ಹೊಸ ಅಧಿಕಾರಿ ವರ್ಗ ಚುನಾಯಿಸಲ್ಪಟ್ಟಿತು. ಇದು ಆಡಳಿತ ವರ್ಗಕ್ಕೆ ಎಳ್ಳಷ್ಟು ಹಿಡಿಸಲಿಲ್ಲ. ಆದ್ದರಿಂದ ಹೇಗಾದರೂ ಮಾಡಿ ಈ ನಾಯಕತ್ವವನ್ನು ಬದಲಿಸಲು ಮಾಲೀಕರು ಸರ್ವ ಪ್ರಯತ್ನ ನಡೆಸುತ್ತಿದ್ದಾರೆ. ಕಾರ್ಮಿಕರು ತಮ್ಮ ಹಕ್ಕಿಗೆ ಹೋರಾಟ ಮಾಡುವುದು ಕೆಲವು ಹಿತಾಸಕ್ತಿಗಳಿಗೆ ಸಹಿಸಲಾಗದೆ ಅವರೂ ಸಹ ಮ್ಯಾನೇಜ್‌ಮೆಂಟಿನ ಪಿತೂರಿಗೆ ಅಪ್ರತ್ಯಕ್ಷವಾಗಿ ನೆರವಾಗುತ್ತಿದ್ದಾರೆ. ಆದರೆ ಈ ಒಳಸಂಚು ಪಿತೂರಿ ಮಣ್ಣುಪಾಲು ಮಾಡಲು ಕಾರ್ಮಿಕರು ಎಚ್ಚರವಹಿಸಿದ್ದಾರೆಂದು ಇತ್ತೀಚಿಗೆ ನಡೆದ ಹೋರಾಟದಲ್ಲಿ ಎದ್ದು ಕಾಣುತ್ತದೆ.

ಮ್ಯಾನೇಜ್‌ಮೆಂಟಿಗೆ ಹೊಸ ನಾಯಕತ್ವದ ಮೇಲೆ ದ್ವೇಷಕ್ಕೆ ಕಾರಣ- ಟೈಮ್ ಮೋಷನ್ ಸ್ಟಡಿ, ಪುನರ್ ಪರಿಶೀಲನೆ, ಸ್ಟಾಂಡಿಂಗ್ ಆರ್ಡರ್ ತಿದ್ದುಪಡಿ, ಸರಿಯಾದ ಪ್ರೊಮೋಷನ್ ಪಾಲಿಸಿ, ಅಕ್ರಮ ಸಸ್ಪೆನ್‌ಷನ್, ಟರ್ಮಿನೇಷನ್ ಮತ್ತು ಡಿಸ್‌ಮಿಸಲ್ ವಿರುದ್ಧ ಕಾರ್ಯಕ್ರಮಗಳನ್ನು ಹಾಕಿಕೊಂಡು ಕಾರ್ಮಿಕರಲ್ಲಿ ಜಾಗ್ರತೆಯನ್ನುಂಟುಮಾಡಿ, ಸಂಘವನ್ನು ಪ್ರಜಾಪ್ರಭುತ್ವ ರೀತಿಯಲ್ಲಿ ಸಂಘಟಿಸುತ್ತಿರುವುದೇ ಆಗಿದೆ. ಮೈಕೋ ಕಾರ್ಮಿಕರಲ್ಲಿ ಹಿಂದೆಂದೂ ಇಲ್ಲದ ಉತ್ಸಾಹ ಆತ್ಮ ವಿಶ್ವಾಸ ಬಂದಿದೆ.

ಮ್ಯಾನೇಜ್‌ಮೆಂಟಿನವರು ಕಾರ್ಮಿಕರನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಸಾಧ್ಯವಾಗದಾಗಿದೆ. ಅಧಿಕಾರಿಯೊಬ್ಬ ಕಾರ್ಮಿಕರನ್ನು "ದಕ್ಷಿಣ ಭಾರತದ ನಾಯಿಗಳು" ಎಂದು ಕರೆದಿದ್ದಕ್ಕೆ ಕಾರ್ಮಿಕರು ತಮ್ಮ ಪ್ರತಿಭಟನೆ ಸೂಚಿಸಿದರು. ಮೈಕೋ ಕಾರ್ಮಿಕರ ಸಂಘ ಈ ಬಗ್ಗೆ ಮ್ಯಾನೇಜ್‌ಮೆಂಟಿಗೆ ಪತ್ರ ಬರೆದರೂ, ಆ ಪತ್ರ ಕಸದ ಬುಟ್ಟಿಗೆ ಹೋಯಿತು. ಇದರಿಂದ ಆಕ್ರೋಷಗೊಂಡ ಕಾರ್ಮಿಕರು 8-4-79ರಂದು ಊಟವನ್ನು ಬಹಿಷ್ಕರಿಸಿದರು. ಮ್ಯಾನೇಜ್‌ಮೆಂಟ್ ಆ ಅಧಿಕಾರಿಯ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಲು ಮುಂದೆ ಬರಲಿಲ್ಲ. ತಾ. 9-4-79 ರಂದು ಸುಮಾರು ನಾಲ್ಕು ಸಹಸ್ರ ಕಾರ್ಮಿಕರು ಶಾಂತಿಯುತ ಪ್ರದರ್ಶನ ನಡೆಯಿಸಿ ಲೇಬರ್ ಕಮೀಷನರ್‌ರವರಿಗೆ ಒಂದು ಮನವಿಯನ್ನು ಅರ್ಪಿಸಿದರು.

ಲೇಬರ್ ಕಮೀಷನರ್‌ರವರು 16-4-79 ರಂದು ಈ ಬಗ್ಗೆ ಪರಿಶೀಲನೆ ಮಾಡುವುದಾಗಿ ಹೇಳಿ ಜಂಟಿ ಸಭೆಯನ್ನು ಕರೆದರು. ಹೇಗಾದರೂ ಮಾಡಿ ಸಂಘವನ್ನು ಒಡೆಯಬೇಕೆಂದು ಪಣತೊಟ್ಟು 14-4-79 ರಂದು ವಿನಾಕಾರಣ 7 ಜನ ಸಂಘದ ಮುಖಂಡರಿಗೆ ಮ್ಯಾನೇಜ್‌ಮೆಂಟು ಸಸ್ಪೆನ್‌ಷನ್ ನೋಟೀಸ್ ಜಾರಿಮಾಡಿತು. ಸಂಘದ ಅಧಿಕಾರಿ ವರ್ಗ ಇದನ್ನು ವಾಪಸ್ಸು ಪಡೆಯಲು ಮಾಡಿದ ಪ್ರಯತ್ನಗಳೆಲ್ಲಾ ವಿಫಲವಾಯಿತು. ಕಾರ್ಮಿಕರು ಮಿಂಚಿನ ಮುಷ್ಕರ ಮಾಡಿದರೆಂಬ ಕಾರಣದಿಂದಾಗಿ "ಲಾಕ್ ಔಟ್" ಘೋಷಿಸಿ ಸುಮಾರು 30ರಿಂದ 35 ಪೋಲೀಸ್ ವ್ಯಾನ್‌ಗಳನ್ನು ಕರೆಯಿಸಿ ಕಾರ್ಮಿಕರನ್ನು ಸಿಕ್ಕಾಪಟ್ಟೆ ಹೊಡೆದು ಕೆಲವರಿಗೆ ತೀವ್ರಗಾಯಮಾಡಿ ಹೊರಗಟ್ಟಲಾಯಿತು. ಮ್ಯಾನೇಜ್‌ಮೆಂಟ್ ಮತ್ತು ಅವರ ಕೆಲವು ಹಿಂಬಾಲಕರು ಕಾರ್ಮಿಕರು ಈ ಘಟನೆಗಳಿಂದ ಹೆದರಿ ಅವರ ಐಕ್ಯತೆ ಮತ್ತು ಹೋರಾಟ ಶಕ್ತಿ ಕುಗ್ಗುತ್ತೆಂದು ಲೆಕ್ಕಾಚಾರ ಹಾಕಿದ್ದರು. ಆದರೆ ಸಂಘದ ಸರಿಯಾದ ನಾಯಕತ್ವದಿಂದಾಗಿ ಕಾರ್ಮಿಕರಲ್ಲಿ ಉತ್ಸಾಹ, ಹೋರಾಟದ ಮನೋಭಾವನೆ, ಐಕ್ಯತೆಗಳು ಹೆಚ್ಚಾದವು. ಸಂಘ ಕರೆದ ಸಭೆಗಳಿಗೆ ಸಾವಿರಗಟ್ಟಲೆ ಕಾರ್ಮಿಕರು ಧಾವಿಸಿ ಬರುತ್ತಿದ್ದರು. ತಾ. 18-4-79 ರಂದು ವಿಧಾನಸೌಧದ ಮುಂದೆ ನಡೆಯಿಸಿದ ಮತಪ್ರದರ್ಶನದಲ್ಲಿ ಕಾರ್ಮಿಕರ ಕುಟುಂಬದವರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದು ಉಲ್ಲೇಖನೀಯ. ಮೈಕೋ ಕಾರ್ಮಿಕರಲ್ಲಿ ಹೋರಾಟ ಭಾವನೆಯೆ ಇಲ್ಲವೆಂದು ಯೋಚಿಸಿದ್ದ ಜನನ್ನು ಇದು ಚಕಿತಗೊಳಿಸಿತು. ಈ ಕಾರ್ಮಿಕರ ಐಕ್ಯ ಹೋರಾಟ, ನಗರದ ಇತರ ಕಾರ್ಮಿಕರ ಸೌಹಾರ್ದ ಬೆಂಬಲ, ವಿರೋಧ ರಾಜಕೀಯ ಪಕ್ಷಗಳ ಬೆಂಬಲ, ಶಾಸನ ಸಭೆಯ ಒಳಗೂ ಮತ್ತು ಹೊರಗೂ ಸರ್ಕಾರದ ಮೇಲೆ ಒತ್ತಾಯ ತಂದಿತು. ಮೈಕೋ ಮ್ಯಾನೇಜ್‌ಮೆಂಟ್ ಕಾರ್ಮಿಕರ ದೃಢ ನಿರ್ಧಾರದ ಮುಂದೆ ಮಣಿಯಬೇಕಾಯಿತು. ಕಾರ್ಮಿಕರಿಗೆ ಜಯ ದೊರಕಿತು. ಬೆಂಗಳೂರಿನ ಕಾರ್ಮಿಕವರ್ಗದ ಹೋರಾಟದಲ್ಲಿ ಹೊಸ ತಿರುವು ಕೊಟ್ಟಿತು.

ಈ ಮೈಕೋ ಕಾರ್ಮಿಕರ ಹೋರಾಟದ ಜಯ ನಗರದ ಇತರ ಕಾರ್ಮಿಕರ ಮೇಲೂ ಪ್ರಭಾವ ಬೀರಿದೆ. ಹಿಂದೆ ಮೈಕೋ ಕಾರ್ಮಿಕರ ಸಂಘ A.I.T.U.C. ಗೆ ನೊಂದಾಣಿಕೆಯಾಗಿದ್ದರೂ ಮೈಕೋ ಕಾರ್ಮಿಕರಿಗೆ "ಮೇ ದಿನದ" ಬಗ್ಗೆಯೇ ಗೊತ್ತಿರಲಿಲ್ಲ. ಮೊದಲನೆಯಭಾರಿಗೆ ಮೈಕೋ ಕಾರ್ಮಿಕರು "ಮೇ ದಿನಕ್ಕೆ" ರಜಾಪಡೆದು 1979ನೆಯ ಮೇ ದಿನವನ್ನು ವಿಜೃಂಭಣೆಯಿಂದ ಆಚರಿಸಿದರು ಮತ್ತು 25 ವರ್ಷ ಸರ್ವಿಸ್ ಮಾಡಿದವರಿಗೆ ಸನ್ಮಾನಮಾಡಿದರು. ಮೈಕೋ ಕಾರ್ಮಿಕರು ಇವುಗಳಿಂದ ತೃಪ್ತರಾಗಿ ತಮ್ಮ ಜವಾಬ್ದಾರಿಯನ್ನು ಮರೆಯಬಾರದು. ಸೋಲನ್ನು ಅನುಭವಿಸಿದ ಮಾಲೀಕವರ್ಗ ಏಟುತಿಂದ ನಾಗರಹಾವಿನಂತೆ ತನ್ನ ಛಲವನ್ನು ಸಾಧಿಸಲು ಪ್ರಯತ್ನಿಸುತ್ತದೆ. ಅದನ್ನು ವಿಫಲಗೊಳಿಸಲು ಒಂದೇ ಒಂದು ಮದ್ದು-ಅದು ಉಕ್ಕಿನ ಐಕ್ಯತೆ, ವರ್ಗಜಾಗೃತಿ, ರಾಜಕೀಯ ಪ್ರಜ್ಞೆ, ಜವಾಬ್ದಾರಿಯ ಅರಿವು ಮತ್ತು ಪ್ರಚೋದನೆಗೆ ಅವಕಾಶ ನೀಡದಿರುವುದು.

ಈ ಮಹಾತ್ಕಾರ್ಯವನ್ನು ಮೈಕೋ ಕಾರ್ಮಿಕರು ನೆರವೇರಿಸಿ ಕಾರ್ಮಿಕರ ಹೋರಾಟದಲ್ಲಿ ತಮ್ಮ ಚಾರಿತ್ರಿಕ ಪಾತ್ರ ವಹಿಸುವರೆಂಬ ವಿಶ್ವಾಸ ನಮಗಿದೆ.

ರಾಜ್ಯದಾದ್ಯಂತ

ಬೀಡಿ ಕಾರ್ಮಿಕರ ಪ್ರತಿಭಟನೆ

ನಿಗದಿಗೊಳಿಸಿದ ಕನಿಷ್ಟ ವೇತನ ಜಾರಿ, ಕಂಟ್ರಾಕ್ಟ್ ಪದ್ಧತಿಯನ್ನು ತೆಗೆದು ಹಾಕಬೇಕು ಇವೇ ಇತ್ಯಾದಿ ಬೇಡಿಕೆಗಳನ್ನು ಪಡೆಯಲು ರಾಜ್ಯದಾದ್ಯಂತ ಬೀಡಿಕಾರ್ಮಿಕರು ಬೀಡಿಕಾರ್ಮಿಕರ ಫೆಡರೇಷನ್ ಕರೆ ಮೇರೆಗೆ ಕೆಲವು ತಿಂಗಳುಗಳ ಹಿಂದೆ ಹೋರಾಟ ಮಾಡಲು ಸಜ್ಜಾದಾಗ ರಾಜ್ಯ ಕಾರ್ಮಿಕ ಮಂತ್ರಿಗಳ ಆಶ್ವಾಸನೆ ಮೇಲೆ ಹೋರಾಟ ಕಾರ್ಯಕ್ರಮವನ್ನು ಮುಂದೂಡಲಾಗಿತ್ತು. ಆದರೆ ಮಂತ್ರಿಯವರು ಕೊಟ್ಟ ಮಾತನ್ನು ಉಳಿಸಲಿಲ್ಲ. ಬೀಡಿ ಮಾಲೀಕರು ಬೇಡಿಕೆಗಳ ಬಗ್ಗೆ ತೆಪ್ಪಗಿದ್ದರು. ಇದನ್ನು ಪ್ರತಿಭಟಿಸಿ, ಮೇಲಿನ ಮುಖ್ಯ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ 21-5-79 ರಂದು ರಾಜ್ಯಾದ್ಯಂತ ಬೀಡಿ ಕಾರ್ಮಿಕರಿಂದ ಪ್ರತಿಭಟನೆ ನಡೆಯಿತು. ಈ ತನಕ ದೊರೆತ ವರದಿ ಪ್ರಕಾರ ಹರಿಹರ, ಸಿರಾ, ಕುಣಿಗಲ್, ತುಮಕೂರು, ಬೆಂಗಳೂರು, ಕೋಲಾರ, ಮೈಸೂರು, ಮಂಗಳೂರುಗಳಲ್ಲಿ 21ರಂದು ಮುಷ್ಕರ, ಘೇರಾವೊ ಮತ್ತು ಪ್ರತಿಭಟನಾ ಕಾರ್ಯಕ್ರಮಗಳು ಜರುಗಿದುವು. ಮಂಗಳೂರಲ್ಲಿ ನೂರಾರು ಬೀಡಿಕಾರ್ಮಿಕರು ಲೇಬರ್ ಆಫೀಸರನ್ನು ಗಂಟೆಗಟ್ಟಲೆ ಘೇರಾವೊ ಮಾಡಿದರು. ಹರಿಹರದಲ್ಲಿ ಮುಷ್ಕರ ಮುಂದುವರೆದಿದೆ. ಪ್ರತಿಭಟನೆಯ ಪರಿಣಾಮ ತುಮಕೂರು, ಕುಣಿಗಲ್‌ಗಳಲ್ಲಿ ಲಾಕ್ ಔಟ್ ಸಾರಲಾಗಿದೆ. ಉಳಿದೆಡೆಗಳಲ್ಲೂ ಬಿರುಸಿನ ಕಾರ್ಯಕ್ರಮ ನಡೆದಿದೆ.

ರಾಜ್ಯದಾದ್ಯಂತ ನಡೆಯಲಿರುವ ದೀರ್ಘಕಾಲದ ಹೋರಾಟಕ್ಕೆ ಇದು ನಾಂದಿ. ಈಗಲಾದರೂ ಸರಕಾರ ಮತ್ತು ಮಾಲೀಕರು ಬೇಡಿಕೆಗಳನ್ನು ಈಡೇರಿಸದಿದ್ದರೆ, ಬೀಡಿಕಾರ್ಮಿಕರು ಹೋರಾಟ ಮಾಡಿಯೇ ತೀರುವರು. ಬೀಡಿಕಾರ್ಮಿಕರ ಹೋರಾಟಕ್ಕೆ ಉಳಿದೆಲ್ಲಾ ಕಾರ್ಮಿಕರ ಬೆಂಬಲ ಸಿಕ್ಕಿಯೇ ಸಿಗುವುದು.

ಜನತೆಯ ಸಮಸ್ಯೆಗಳಿಗೆ ಪರಿಹಾರ ಮಾರ್ಗ

—ಎನ್. ಕೆ. ಉಪಾಧ್ಯಾಯ

"ರಾಜ್ಯದ ರಸ್ತೆ ಸಾರಿಗೆಯ ಕೆಲವು ಮಾರ್ಗಗಳನ್ನು ಖಾಸಗಿಯವರಿಗೆ ಬಿಟ್ಟುಕೊಡಬೇಕೆಂಬ ಆಲೋಚನೆಯಲ್ಲಿದೆ" ಎಂದು ಮುಖ್ಯ ಮಂತ್ರಿ ದೇವರಾಜ ಅರಸರು ಪಿರಿಯಾಪಟ್ಟಣದಲ್ಲಿ ಇತ್ತೀಚೆಗೆ ಹೇಳಿದ್ದರು. "ಕೆ. ಎಸ್. ಆರ್. ಟಿ. ಸಿ. ಅತಿದೊಡ್ಡ ಸಂಸ್ಥೆ. ಅದನ್ನು ಸರಿಯಾಗಿ ನಡೆಸಿಕೊಂಡು ಹೋಗುವುದು ಬಹಳ ಕಷ್ಟ" ಎಂಬ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದರು.

ಮೊದಲು ಸೋಶಲಿಸ್ಟ್ ಆಗಿದ್ದು ಈಗ ಜನತಾಪಕ್ಷದ ಸರಕಾರದಲ್ಲಿ ಕೈಗಾರಿಕಾ ಮಂತ್ರಿಯಾಗಿರುವ ಜಾರ್ಜ್ ಫರ್ನಾಂಡೀಸರು ಒಂದೆಡೆ ಗುತ್ತೇದಾರಿ ಖಾಸಗೀ-ವಿದೇಶಿ ಕಂಪನಿಗಳನ್ನು ರಾಷ್ಟ್ರೀಕರಿಸಬೇಕೆಂದು ಸಾರುತ್ತಿರುವಾಗಲೇ ಮತ್ತೊಂದೆಡೆ ಪಶ್ಚಿಮ ಜರ್ಮನಿಯ ಹಾಗೂ ಅಮೆರಿಕಾ ಮುಂತಾದ ಸಾಮ್ರಾಜ್ಯಶಾಹಿ-ಬಂಡವಾಳಶಾಹಿ ದೇಶಗಳಲ್ಲಿರುವ ಗುತ್ತೇದಾರಿ ಕಂಪನಿಗಳ ಜೊತೆಯಲ್ಲಿ ಒಪ್ಪಂದ ಮಾಡಿಕೊಂಡು ದೇಶದ ಹಿತವನ್ನು ಕಡೆಗಣಿಸುವ ಕೆಲಸವನ್ನೂ ಮಾಡುತ್ತಿರುವುದನ್ನು ನೋಡುತ್ತಿದ್ದೇವೆ. ಇತ್ತೀಚೆಗೆ ಸೀಮನ್ಸ್ ಮತ್ತು ಬಿ. ಎಚ್. ಇ. ಎಲ್. ಗಳೊಳಗಾದ ಒಪ್ಪಂದ ಒಂದೆಡೆ. ಕೋಕಾಕೋಲಾ ಕಂಪನಿಯ ರಾಷ್ಟ್ರೀಕರಣ, ಬಿರ್ಲಾ-ಟಾಟಾ ಕಂಪನಿಗಳ ರಾಷ್ಟ್ರೀಕರಣದ ಬೆದರಿಕೆ ಮತ್ತೊಂದೆಡೆ.

ಈ ರೀತಿ ಇಂದಿರಾ ಕಾಂಗ್ರೆಸ್ ಮತ್ತು ಜನತಾ ಸರಕಾರಗಳು ಸಹಕಾರಿ ರಂಗದ ಬೆಳವಣಿಗೆ, ಸರಕಾರಿ ರಂಗದ ಕೈಗಾರಿಕೋದ್ಯಮಗಳಿಗೆ ಪ್ರೋತ್ಸಾಹ ನೀಡುವುದರ ಅವಶ್ಯಕತೆಗಳ ಕುರಿತು ಉದ್ದುದ್ದ ಭಾಷಣ ಮಾಡುತ್ತ ಗುತ್ತೇದಾರಿ ಬಂಡವಾಳಶಾಹಿಗಳಿಗೆ ಹೆಚ್ಚೆಚ್ಚು ಪ್ರೋತ್ಸಾಹ ನೀಡಿ ಅವರ ಲಾಭ ನೂರಾರುಪಟ್ಟು ಹೆಚ್ಚಾಗುವಂತೆ ಮಾಡಿರುವ ವಿಷಯ ಜಗಜ್ಜಾಹೀರವಾಗಿದೆ. ಅಷ್ಟೇ ಅಲ್ಲ, ಸರಕಾರದ ಅಪ್ರತ್ಯಕ್ಷ ಕರ ಹೇರುವ ನೀತಿ, ಉದ್ಯಮಿಗಳು ವ್ಯಾಪಾರಸ್ಥರು ಮನ ಬಂದಂತೆ ಬೆಲೆ ಹೆಚ್ಚಿಸುವ ಕುರಿತು ಸರಕಾರದ ಕಣ್ಣುಮುಚ್ಚಾಲೆಯಾಟಗಳಿಂದಾಗಿ ಎಲ್ಲ ವಸ್ತುಗಳ ಬೆಲೆ ಏರಿಕೆಗೆ ಹತೋಟಿ ಇಲ್ಲದಂತಾಗಿದೆ. ತಮಗೆ ಹಾನಿಯಾಗುತ್ತದೆಂಬ ಉದ್ಯಮಿಗಳ ಕೂಗಿಗೇ ಮಿತಿ ಇಲ್ಲದಂತಾಗಿದೆ. ಆದರೆ ರೈತನು ಬೆಳೆಯುವ ಆಹಾರಧಾನ್ಯ ಹಾಗೂ ಇತರ ಕಚ್ಚಾ ಮಾಲುಗಳಿಗೆ ಬೆಲೆಯ ಸ್ಥಿರತೆ ಕೊಡಿಸುವವರು ಮಾತ್ರ ಇಲ್ಲದಾಗಿದ್ದಾರೆ. ಹೀಗಾಗಿ ಆರ್ಥಿಕ ಬಿಕ್ಕಟ್ಟು ದಿನಹೋದಂತೆ ಬಿಗಿಯಾಗುತ್ತ ನಡೆದಿದೆ. ಇದಕ್ಕೆ ಪರಿಹಾರವೇನು ?

ಹೋದ ವರ್ಷ ಏಪ್ರಿಲ್ ತಿಂಗಳಲ್ಲಿ ಜಲಂಧರದಲ್ಲಿ ಸಮಾವೇಶಗೊಂಡ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್‌ಪಕ್ಷದ 10ನೇ ಸಮ್ಮೇಳನದಲ್ಲಿ ರಾಜಕೀಯ ನಿರ್ಣಯದಲ್ಲಿ ನಮ್ಮ ದೇಶದ ಆರ್ಥಿಕ ಬಿಕ್ಕಟ್ಟನ್ನು ಈ ರೀತಿ ವಿವರಿಸಲಾಗಿದೆ. "ಕಳೆದ ಕೆಲವು ವರ್ಷಗಳಿಂದ ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಮೇಲಿಂದ ಮೇಲೆ ಬಿಕ್ಕಟ್ಟನ್ನೆದುರಿಸುತ್ತಿದೆ. ಬಡತನ, ನಿರುದ್ಯೋಗ ಮತ್ತು ಜನತೆಯ ದುಃಖ ದುಮ್ಮಾನಗಳು ಮಿತಿಮೀರಿ ಜಾಸ್ತಿಯಾಗಿವೆ. ಹಳ್ಳಿಪ್ರದೇಶಗಳಂತೂ ನಿರ್ವಾಸಿತರ ನೆಲೆಬೀಡಾಗಿದೆ. ಅದೇ ಸಮಯದಲ್ಲಿ ಗುತ್ತೇದಾರಿಗಳ ಹಿರಿ ಬಂಡವಾಳದಾರರ, ಭೂಮಾಲೀಕರ ಹಾಗೂ ದೊಡ್ಡ ವ್ಯಾಪಾರಸ್ಥರ ಆರ್ಥಿಕ ಅಧಿಕಾರ ಮತ್ತು ಶಕ್ತಿ ಹೆಚ್ಚಾಗಿದೆ. ಯಾಕೆಂದರೆ ಸಂಪತ್ತೆಲ್ಲ ಅವರ ಕೈವಶವಾಗಿದೆ. ಅದೇ ಕಾಲದಲ್ಲಿ ಪರದೇಶಿ ಸಾಮ್ರಾಜ್ಯಶಾಹಿಗಳ, ಜಗತ್ತಿನ ಬಂಡವಾಳಶಾಹಿ ಮಾರ್ಕೇಟಿನ ಮೇಲಿನ ಅವಲಂಬನೆ ಹೆಚ್ಚಾಗಿದೆ. ಬಂಡವಾಳಶಾಹಿ ದಾರಿಯಲ್ಲಿ ನಮ್ಮ ದೇಶದ ಆರ್ಥಿಕ ಪದ್ಧತಿಯನ್ನು ನಡೆಸಿಕೊಂಡು ಹೋಗುವುದರ ಪರಿಣಾಮವಿದು. ಇದರಿಂದಾಗಿ ಬಂಡವಾಳದಾರರಿಗೆ ಹೆಚ್ಚಿನ ಸೌಲಭ್ಯಗಳು ದೊರೆತಿವೆ. ಜನರ ಮೇಲೆ ಹೇಳತೀರದಷ್ಟು ದಬ್ಬಾಳಿಕೆ ನಡೆದಿದೆ". ಹಾಗಾದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್‌ಪಕ್ಷ ಇದಕ್ಕೇನು ಉಪಾಯ ಸೂಚಿಸುತ್ತದೆ.

ತುರ್ತುಪರಿಸ್ಥಿತಿಯಲ್ಲಿ, ಅದಕ್ಕಿಂತ ಮುಂಚೆ ಮತ್ತು ಅನಂತರ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್‌ಪಕ್ಷ ಎಡ ಮತ್ತು ಪ್ರಜಾಪ್ರಭುತ್ವಶಕ್ತಿಗಳನ್ನು ಒಂದುಗೂಡಿಸಲು ಸತತ ಪ್ರಯತ್ನ ನಡೆಸಿತು. ಯಾಕೆಂದರೆ ಸರ್ವಾಧಿಕಾರತ್ವದ ವಿರುದ್ಧ ಹೋರಾಟದಲ್ಲಿ ಈ ಶಕ್ತಿಗಳೇ ಮುಖಂಡತ್ವ ವಹಿಸಲು ಸಾಧ್ಯ.

ಜನತೆ ಎದುರಿಸುತ್ತಿರುವ ಅಪಾರ ಸಂಕಷ್ಟಗಳ ಹಾಗೂ ಸರ್ವಾಧಿಕಾರತ್ವದ ಅಪಾಯಗಳ ಅರಿವಾಗಿ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು "ಗುತ್ತೇದಾರಿಗಳು, ಹಿರಿಬಂಡವಾಳದಾರರು-ಭೂಮಾಲೀಕರು ಮತ್ತು ಬೆಳೆಯುತ್ತಿರುವ ವಿದೇಶಿ ಬಂಡವಾಳದ ಪ್ರಭಾವದ ವಿರುದ್ಧ" ತಮ್ಮ ಕಟುರೀತಿಯ ಬಾಣಗಳನ್ನೆಸೆಯುತ್ತಿವೆ. ಬಂಡವಾಳಗಾರ-ಭೂಮಾಲೀಕಪಕ್ಷಗಳ ಕಾರ್ಯಕ್ರಮಗಳಿಗೆ ವ್ಯತಿರಿಕ್ತವಾದ ರಾಜಕೀಯ-ಆರ್ಥಿಕ ಕಾರ್ಯಕ್ರಮವನ್ನು ಜನತೆಯ ಮುಂದಿಟ್ಟು ಅಂಥ ಕಾರ್ಯಕ್ರಮದ ಕಾರ್ಯಾಚರಣೆಗೆ ಜನರನ್ನು ಸಂಘಟಿಸಿದರೆ, ಅವರೆಲ್ಲ ಬಂಡವಾಳಶಾಹಿ-ಭೂಮಾಲೀಕರ ಪಕ್ಷಗಳನ್ನು ಹಿಂಬಾಲಿಸುವುದು ಬಿಟ್ಟು ಮತ್ತೊಂದು ಮುಖಂಡತ್ವದ ಬೆನ್ನ ಹತ್ತುವಂತಾಗುತ್ತದೆ. ಈ ರೀತಿ ಕಾಂಗ್ರೆಸ್ (ಐ) ಮತ್ತು ಜನತಾಪಾರ್ಟಿಯ ಕುರಿತು ಬಹುಸಂಖ್ಯೆ ಜನರಲ್ಲಿರುವ ಭ್ರಮೆ ನಿರಸನ ಮಾಡಲು ಸಾಧ್ಯವಾದರೆ, ಆಜನತೆ ತಮ್ಮ ಆಶೋತ್ತರಗಳ ಪೂರೈಕೆಗಾಗಿ ಬದ್ಧ ಸಂಘಟನೆಗೆ ಬೆಂಬಲ ಕೊಡಲು ಸಿದ್ಧವಾದರೆ ಮಾತ್ರ ದೇವರಾಜ ಅರಸ್ ಮತ್ತು ಜಾರ್ಜ್‌ಫರ್ನಾಂಡೀಸರ ಅಭಿಪ್ರಾಯಗಳಿಗೆ ಸರಿಯಾದ ಉತ್ತರಕೊಡಲು ಸಾಧ್ಯ.

ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಕಾರ್ಯಕ್ರಮದಲ್ಲಿ ಕೆಲವು ಮುಖ್ಯಾಂಶಗಳನ್ನು ಎತ್ತಿತೋರಿಸಲಾಗಿದೆ.

ವಿದೇಶಗಳ ಪ್ರಭಾವವಿಲ್ಲದ ದೇಶದ ಆರ್ಥಿಕ ಪದ್ಧತಿಯನ್ನು ಸ್ವತಂತ್ರವಾಗಿ, ಸುಯೋಜಿತವಾಗಿ ಬೆಳೆಸುವುದು, ವಿದೇಶಿ ಗುತ್ತೇದಾರಿ ಕಂಪನಿಗಳನ್ನು ಪರಿಹಾರವಿಲ್ಲದೆ ರಾಷ್ಟ್ರೀಕರಿಸುವುದು, ವಿದೇಶಿ ಸಾಲ ವಾಪಸಾತಿಯ ಮೇಲೆ ಕೂಡಲೇ ಪ್ರತಿಬಂಧ ಹೇರುವುದು, ನಮ್ಮ ದೇಶದ ಆರ್ಥಿಕ ರಂಗದಲ್ಲಿ ವಿದೇಶಿ ಗುತ್ತೇದಾರಿ ಬಂಡವಾಳ ಮತ್ತು ವಿಶ್ವಬ್ಯಾಂಕ್ ಕೈವಾಡ ನಡೆಸದಂತೆ ನೋಡಿಕೊಳ್ಳುವುದು.

ನಮ್ಮ ದೇಶದ ಗುತ್ತೇದಾರಿ ಕಂಪನಿಗಳನ್ನು ರಾಷ್ಟ್ರೀಕರಿಸುವುದು. ದೊಡ್ಡ ಬಂಡವಾಳದಾರರ-ಭೂಮಾಲಕರ ಮತ್ತು ಬಹುಸಂಖ್ಯೆ ಜನತೆಯ ಉತ್ಪನ್ನದಲ್ಲಿಯ ಅಂತರವನ್ನು ಕಡಿತಮಾಡುವುದು. ಹಣದುಬ್ಬರ, ಕೊರತೆ ಹಣವಿನಿಯೋಗ, ಹೆಚ್ಚಿನ ಕರಭಾರಗಳನ್ನು ವಿರೋಧಿಸಿ, ಅತ್ಯಾವಶ್ಯಕ ವಸ್ತುಗಳ ಬೆಲೆಯಲ್ಲಿ ಇಳಿಕೆ, ಸರಿಯಾಗಿ ಅವುಗಳನ್ನು ನಾಗರೀಕರಿಗೆ ಒದಗಿಸುವುದು, ಖೋತ ವ್ಯಾಪಾರದ ರಾಷ್ಟ್ರೀಕರಣ.

ಜಮೀನ್ದಾರಿ ಪದ್ಧತಿಯ ಪೂರ್ಣ ರದ್ದತಿ, ಪುರೋಗಾಮಿ ಭೂಮಸೂದೆ ಬಡರೈತರಿಗೆ ಮತ್ತು ರೈತಕೂಲಿಗಾರರಿಗೆ ಪುಕ್ಕಟೆಯಾಗಿ ಭೂಮಿಹಂಚುವಿಕೆ.

ಎಲ್ಲರಿಗೂ ಉದ್ಯೋಗ ಒದಗಿಸಲು ಯೋಗ್ಯ ಯೋಜನೆಗಳು,. ಅದಾಗುವತನಕ ನಿರುದ್ಯೋಗಿಗಳಿಗೆ ಪರಿಹಾರ.

ಇಂಥ ಕಾರ್ಯಕ್ರಮಗಳಿಂದ ಹೊಸ ಶಕ್ತಿಯನ್ನು ಬೆಳೆಸಿ, ನವ ಸಮಾಜ ನಿರ್ಮಿಸಬಹುದೆಂಬ ಅಪೇಕ್ಷೆ ಹೊಂದಿರುವವರೂ ಬಹಳ ಜನ.

ಎಡ ಮತ್ತು ಪ್ರಜಾಪ್ರಭುತ್ವ ರಂಗದ ಕಾರ್ಯಕ್ರಮಕ್ಕೆ ಪೂರಕವಾಗಿ ಮತ್ತೊಂದು ಆರ್ಥಿಕ ಸಮಸ್ಯೆಯನ್ನೂ ತಿಳಿದುಕೊಳ್ಳುವುದು ಅತ್ಯಗತ್ಯ.

ಚರಣಸಿಂಗ್ ಅವರ ಬಜೆಟ್ಟಿನ ಪರಿಣಾಮವಾಗಿ ಬೆಲೆಯೇರಿಕೆಯಾಗುತ್ತಿರುವುದನ್ನು ಲೋಕಸಭೆ ಸದಸ್ಯರು ಮಂತ್ರಿಗಳ ಗಮನಕ್ಕೆ ತಂದಾಗ ಅದು ಸಾಧ್ಯವಿಲ್ಲೆಂದು ಚರಣಸಿಂಗ್ ಹಟಹಿಡಿದರೂ ಕೂಡ, ಬೆಲೆಯೇರಿದ್ದು ನಿಜವೆಂಬ ಸಂಗತಿಯನ್ನು ಈಗ ಎಲ್ಲರೂ ಒಪ್ಪಿಕೊಂಡಿದ್ದಾರೆ. ಇದಕ್ಕೆ ಬಂಡವಾಳಶಾಹಿ ಆರ್ಥಿಕ ನೀತಿಯೇ ಮುಖ್ಯಕಾರಣ. ಹಾಗಾದರೆ ಇದನ್ನು ತಪ್ಪಿಸಲು ಉಪಾಯವೇನು ? ಸಮಾಜವಾದಿ ಪದ್ಧತಿಯೇ ಇದಕ್ಕೆ ಪರಿಹಾರವಲ್ಲದೆ ಮತ್ತೇನಲ್ಲ.

ಬಂಡವಾಳಶಾಹಿ ಪದ್ಧತಿಯಲ್ಲಿ ಉತ್ಪಾದನಾ ಸಾಧನಗಳೆಲ್ಲಾ ವೈಯಕ್ತಿಕ ಬಂಡವಾಳದಾರರ ಸೊತ್ತಾಗಿರುತ್ತದೆ. ಉತ್ಪಾದನೆಗಳೆಲ್ಲಾ ಅರಾಜಕ ಸ್ಥಿತಿಯಲ್ಲಿರುತ್ತವೆ. ಅತ್ಯಂತ ಹೆಚ್ಚು ಲಾಭಗಳಿಸುವ ಬಂಡವಾಳದಾರರೇ ವಸ್ತುಗಳ ಪೂರೈಕೆಯನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುತ್ತಾರೆ. ದುಡಿಯುವ ಜನತೆಗೆ ಕಡಿಮೆ ಮತ್ತು ಸ್ಥಿರವಾದ ಬೆಲೆಯಲ್ಲಿ ವಸ್ತುಗಳನ್ನು ಮಾರಾಟ ಮಾಡುವ ಬದಲು ತಮ್ಮ ಮನಸ್ಸಿಗೆ ತಕ್ಕ ಬೆಲೆ ಬಾರದಿದ್ದರೆ, ತಮ್ಮಲ್ಲಿರುವ ಸಂಗ್ರಹವನ್ನೆಲ್ಲ ನಾಶ ಮಾಡುವಂಥ ಪ್ರವೃತ್ತಿ ಈ ಬಂಡವಾಳದಾರ ಲಾಭಕೋರರದ್ದಾಗಿರುತ್ತದೆ. ಆದ್ದರಿಂದ ಅತಿ ಪ್ರಸರಣವೆಂಬುದು ಬಂಡವಾಳಶಾಹಿ ಸಮಾಜದಲ್ಲಿ ವಾಸಿಯಾಗದ ಜಡ್ಡಾಗಿರುತ್ತದೆ.

ಆದ್ದರಿಂದ ನಮ್ಮ ದೇಶದ ಜನತೆ ಎದುರಿಸುತ್ತಿರುವ ನಿರುದ್ಯೋಗ ಸಮಸ್ಯೆ, ಬೆಲೆ ಏರಿಕೆ, ಲಾಭಬಡುಕತನ, ಸುಲಿಗೆ, ಜೀವನಮಟ್ಟದಲ್ಲಿ ಅಂತರ, ಭ್ರಷ್ಟಾಚಾರ, ಮತ್ತಿತರ ನೂರಾರು ಅವಗುಣಗಳು ನಾಶವಾಗಬೇಕಾದರೆ ಸಮಾಜವಾದಿ ಪದ್ಧತಿ ಬರಲೇಬೇಕು. ಆ ದಿಸೆಯಲ್ಲಿ ಕೆಲಸ ಮಾಡಬೇಕಾದರೆ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹೇಳುತ್ತಿರುವಂತೆ ಸದ್ಯದ ಮಟ್ಟಿಗೆ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಒಂದೆಡೆ ಸೇರಿಸುವ ಮಹಾಸಾಧನೆಯನ್ನು ಸಾಧಿಸಬೇಕು. ಅನಂತರ ಎಡ ಮತ್ತು ಪ್ರಜಾಪ್ರಭುತ್ವ ರಂಗದ ಕಾರ್ಯಕ್ರಮವನ್ನು ಅವರೆಲ್ಲ ಒಪ್ಪುವಂತೆ ಮಾಡಿ, ಜನರಲ್ಲಿ ಆ ಕಾರ್ಯಕ್ರಮದ ಕುರಿತು ಪ್ರಚಾರ ಮಾಡಿ, ಜನಸಮೂಹದಲ್ಲಿ ಅದರ ತಿಳುವಳಿಕೆ ಮಾಡಿಕೊಟ್ಟು, ದುಡಿಯುವ, ಮಧ್ಯಮವರ್ಗದ, ಬುದ್ಧಿಜೀವಿ ಜನರೆಲ್ಲ ಅದಕ್ಕೆ ಬೆಂಬಲಿಗರಾಗಿ ನಿಲ್ಲುವಂತೆ ಮಾಡಿದರೆ ಮಾತ್ರ ದೇವರಾಜ ಅರಸು, ಜಾರ್ಜ್ ಫರ್ನಾಂಡೀಸ್, ಚರಣಸಿಂಗ್ ಮೊದಲಾದವರ ಆರ್ಥಿಕ ಧೋರಣೆಗೆ ಸರಿಯಾದ ಉತ್ತರ ಕೊಟ್ಟು, ಜನರ ಸಮಸ್ಯೆಗಳ ಪರಿಹಾರಕ್ಕೆ ಬದಲಿ ದಾರಿಯನ್ನು ತೋರಿಸಲು ಸಾಧ್ಯ. ಈಗಾಗಲೇ ಪಶ್ಚಿಮ ಬಂಗಾಲ-ತ್ರಿಪುರಾ ರಾಜ್ಯಗಳ ಜನ ಅಂಥ ಕಾರ್ಯಕ್ರಮದ ಅವಶ್ಯಕತೆಯನ್ನು ಮನದಟ್ಟು ಮಾಡಿಕೊಂಡು, ಇಂದಿರಾ ಕಾಂಗ್ರೆಸ್-ಜನತಾ ಪಕ್ಷಗಳ ಆರ್ಥಿಕ-ರಾಜಕೀಯ ನಿಲುವುಗಳನ್ನು ಸಂಪೂರ್ಣವಾಗಿ ಅಲ್ಲಗಳೆದು, ಎಡ ಮತ್ತು ಪ್ರಜಾಪ್ರಭುತ್ವರಂಗದ-ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡತ್ವದಲ್ಲಿ ಎಂಬುದನ್ನು ಮರೆಯದೆ-ಕಾರ್ಯಕ್ರಮವನ್ನು ಒಪ್ಪಿಕೊಂಡು, ಅದನ್ನು ಕಾರ್ಯರೂಪದಲ್ಲಿ ತಂದು, ಯಶಸ್ವಿಗೊಳಿಸುವ ಚಾರಿತ್ರಾರ್ಹ ಪಾತ್ರ ವಹಿಸುತ್ತಲಿದ್ದಾರೆ. ದೇಶದ ಇತರ ಭಾಗಗಳ ಜನ, ಅದರಲ್ಲೂ ಕರ್ನಾಟಕದ ಜನತೆ ಪ. ಬಂಗಾಳ-ತ್ರಿಪುರಾದ ಜನತೆ ಹಾಕಿಕೊಟ್ಟ ದಾರಿಯಲ್ಲಿ ಮುಂದೆ ಹೋಗಲು ಮುಂದಾಗುತ್ತಾರೆಂದು ಆಶಿಸೋಣ. ಆ ದಿಸೆಯಲ್ಲಿ ನಾವೆಲ್ಲ ದುಡಿಯೋಣ.

ನಗರದ ಜೀವನಾಡಿ ಆಟೋರಿಕ್ಷಾ

—ಸುಬ್ರಮಣ್ಯಂ

ಬೆಂಗಳೂರು ನಗರದಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ಆಟೋರಿಕ್ಷಾಗಳು ಓಡುತ್ತಿವೆ. ಒಂದು ಗಾಡಿಗೆ 2 ಡ್ರೈವರ್ ಎಂಬ ರೀತಿಯಲ್ಲಿ 20 ಸಾವಿರ ಡ್ರೈವರ್‌ಗಳಿದ್ದಾರೆ. ಈ ಕೆಲಸಗಳನ್ನು ನಂಬಿ 1 ಲಕ್ಷ ಜನ ಬದುಕುತ್ತಿದ್ದಾರೆ. ದಿನವೊಂದಕ್ಕೆ 4 ಲಕ್ಷ ರೂ ಪೆಟ್ರೋಲ್ ಖರ್ಚಾಗುತ್ತಿದೆ. 2 ಲಕ್ಷ ಪ್ರಯಾಣಿಕರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುತ್ತಿದೆ. ದಿನವಹಿ 2 ಲಕ್ಷ ರೂ ಆಟೋಮೊಬೈಲ್ ಬಿಡಿ ಭಾಗಗಳು ಮಾರಾಟವಾಗುತ್ತಿವೆ. ಅದನ್ನು ನಂಬಿ ಬದುಕುವ, ಹುಡುಗರು ಮತ್ತು ವರ್ಕ್‌ಶಾಪ್‌ಗಳಾದ, ಲೇತ್, ವೆಲ್ಡಿಂಗ್, ಬ್ರೇಕ್ ಲೈನಿಂಗ್, ಫಿಟ್ಟರ್ಸ್, ಇತರೇ ವರ್ಕ್‌ಶಾಪುಗಳ ಜೊತೆಗೆ, ಬಾಡಿ ಬಿಲ್ಡರ್‌ಗಳು, ಸರ್ವಿಸ್‌ಸ್ಟೇಷನ್‌ಗಳು ನಡೆಯುತ್ತಿದ್ದು, ಮೊದಲೇ ಹೇಳಿದ ಹಾಗೆ ಇವುಗಳೆಲ್ಲದರಲ್ಲೂ 1 ಲಕ್ಷ ಜನ ಕೆಲಸ ಮಾಡಿ ಬದುಕುತ್ತಿದ್ದಾರೆ.

ಹೀಗಿರುವಾಗ ಆಟೋಡ್ರೈವರ್‌ಗಳು ಯಾವರೀತಿ ಶೋಷಣೆಗೆ ಒಳಗಾಗಿದ್ದಾರೆಂದರೆ ಓದುಗರಿಗೆ ಆಶ್ಚರ್ಯವಾಗಬಹುದು. ಬೆಂಗಳೂರಿನಲ್ಲಿ ಹೆಚ್ಚಿನ ಗಾಡಿಗಳ ಮಾಲೀಕರು ಮಾರ್ವಾಡಿಗಳಿಂದಲೂ, ಇತರೆ ಫೈನಾನ್ಸಿಯರ್‌ಗಳಿಂದಲೂ ಶೇ. 30, 35 ಬಡ್ಡಿದರದ ಪ್ರಕಾರ ಆಟೋಗಳನ್ನು ಕೊಂಡುಕೊಂಡು ಓಡಿಸುತ್ತಾರೆ. ಇಷ್ಟು ದೊಡ್ಡ ಕೈಗಾರಿಕೆ ಸರಕಾರದ ಸಹಾಯವಿಲ್ಲದೆ ನಡೆಯುವುದು ಒಂದು ಆಶ್ಚರ್ಯವಾಗಿದೆ. ಎಲ್ಲಾ ಸಣ್ಣ ಕೈಗಾರಿಕೆಗಳೂ ಸರ್ಕಾರದ ಕೃಪೆಯಿಂದ ನಡೆಯುತ್ತಿರುವಾಗ ಈ ಉದ್ಯಮ ಸ್ವತಂತ್ರ

[7ನೇ ಪುಟ ನೋಡಿ]

ಮೂರೂ ಬೂರ್ಜ್ವಾ-ಭೂಮಾಲೀಕ ಪಕ್ಷಗಳು ಬಿಕ್ಕಟ್ಟಿನಲ್ಲಿರುವಾಗ

ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಮುಂದಿರುವ ಕರ್ತವ್ಯ

ವಿನೋಬಾಭಾವೆಯವರ ಉಪವಾಸಕ್ಕೆ ಕೆಲವು ದಿನಗಳ ಹಿಂದೆ ಮತ್ತು ಅವರು ಉಪವಾಸ ನಡೆಸುತ್ತಿದ್ದ ಸಮಯದಲ್ಲಿ ಇಡೀ ದೇಶದ ಜನರು, ಅವರ ಬೇಡಿಕೆ ಮತ್ತು ಆ ಬೇಡಿಕೆಯ ಈಡೇರುವಿಕೆಗೆ ಅವರು ಅನುಸರಿಸಿದ ವಿಧಾನಗಳನ್ನು ಕುರಿತು ಚರ್ಚಿಸುತ್ತಿದ್ದರು. ಉಪವಾಸದಲ್ಲಿದ್ದ ನಾಯಕನಿಗೆ ಪೂರ್ಣ ಬೆಂಬಲ ವ್ಯಕ್ತಪಡಿಸಿದವರು ಮತ್ತು ಅದನ್ನು ಕಟುವಾಗಿ ವಿರೋಧಿಸಿದವರ ನಡುವೆ ತೀವ್ರ ಭಿನ್ನಾಭಿಪ್ರಾಯವಿತ್ತು.

ಇವರಿಬ್ಬರ ಮಧ್ಯೆ, ಭಾವೆಯವರಿಗೆ ಬೆಂಬಲ ನೀಡಿದ ಆದರೆ ಅವರು ಅನುಸರಿಸಿದ ವಿಧಾನದ ಬಗ್ಗೆ ಅಸಮ್ಮತಿ ಹೊಂದಿದ್ದವರು ಇದ್ದರು. ಇನ್ನೊಂದು ಕಡೆ, ಅವರ ಬೇಡಿಕೆಯನ್ನು ವಿರೋಧಿಸಿದ, ಆದರೆ ಈ ಉಪವಾಸದ ಪರಿಣಾಮಗಳ ಬಗ್ಗೆ ಕುತೂಹಲಿಗಳಾಗಿದ್ದವರು ಇದ್ದರು.

ಜನತೆಯ ವಿವಿಧ ವಿಭಾಗಗಳ ನಡುವೆ ಇದ್ದ ಈ ಭಿನ್ನಾಭಿಪ್ರಾಯಗಳು ರಾಜಕೀಯ ಶಕ್ತಿಗಳ ಒಂದು ಹೊಸ ನಿಲುವಾಗಿ ರೂಪು ತಳೆದವು. ಉಪವಾಸದ ವಿರುದ್ಧ ನಿಂತವರು ಪಶ್ಚಿಮಬಂಗಾಳ ಮತ್ತು ಕೇರಳಗಳಲ್ಲದೆ, ರಾಜಕೀಯ ಪಕ್ಷಗಳಾದ ಭಾರತ ಕಮ್ಯುನಿಸ್ಟ್ ಪಕ್ಷ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಜನತಾ ಪಕ್ಷದ ಹಲವಾರು ನಾಯಕರು ಮತ್ತು ಸದಸ್ಯರು, ಎರಡು ಕಾಂಗ್ರೆಸ್‌ಗಳು, ಮುಸ್ಲಿಂಲೀಗ್, ದ್ರಾವಿಡ ಮುನ್ನೇತ್ರ ಕಳಗಂ ಮುಂತಾದವರು ಜಂಟಿಪಟ್ಟಿಯಲ್ಲಿ ಗೋಹತ್ಯಾ ನಿಷೇಧವನ್ನು ಸೇರಿಸುವಂತೆ ಭಾರತದ ಸಂವಿಧಾನವನ್ನು ತಿದ್ದುಪಡಿ ಮಾಡಲಾಗುವುದೆಂದು ಪ್ರಧಾನಮಂತ್ರಿಯವರು ಘೋಷಿಸಿದಾಗ ಇವರೆಲ್ಲರೂ ಒಂದಲ್ಲ ಒಂದು ಕಾರಣಕ್ಕಾಗಿ ಅದನ್ನು ತೀವ್ರವಾಗಿ ಪ್ರತಿಭಟಿಸಿದರು. ಸಂವಿಧಾನಾತ್ಮಕ ತಿದ್ದುಪಡಿಯನ್ನು ವಿರೋಧಿಸುವುದಾಗಿ ಅವರೆಲ್ಲ ಸ್ಪಷ್ಟ ಹೇಳಿಕೆ ಕೊಟ್ಟರು.

ಐಕ್ಯ ಕಾರ್ಯಾಚರಣೆಯನ್ನು ವಿಶಾಲಗೊಳಿಸುವುದು :

ಸಂಸತ್ತಿನ ಎರಡೂ ಸದನಗಳಲ್ಲಿ ಮತ್ತು ವಿವಿಧ ವಿಧಾನಸಭೆಗಳಲ್ಲಿ (ಸಂವಿಧಾನಾತ್ಮಕ ತಿದ್ದುಪಡಿಗೆ ಶೇಕಡಾ ಐವತ್ತರಷ್ಟು ವಿಧಾನಸಭೆಗಳ ಒಪ್ಪಿಗೆ ಅಗತ್ಯ) ನಡೆಯುವ ಮತದಾನದಲ್ಲಿ ಈ ಪ್ರತಿಭಟನೆ ಹೇಗೆ ವ್ಯಕ್ತವಾಗುತ್ತದೆ, ಸಂವಿಧಾನಾತ್ಮಕ ತಿದ್ದುಪಡಿಯನ್ನು ತಂದ ನಂತರವೂ ಗೋಹತ್ಯೆಯನ್ನು ನಿಷೇಧಿಸಲು ಸಾಧ್ಯವೇ ಮುಂತಾದ ಪ್ರಶ್ನೆಗಳು ಭವಿಷ್ಯಕ್ಕೆ ಸೇರಿದ್ದು. ಆದರೆ, ಗೋಹತ್ಯೆ ನಿಷೇಧದ ವಿರುದ್ಧ ಮತ್ತು ಅಥವಾ ಸಂವಿಧಾನಾತ್ಮಕ ತಿದ್ದುಪಡಿ ತರಲಿರುವ ರಾಜ್ಯಗಳ ಅಧಿಕಾರಗಳ ಕಸಿತಗಳ ವಿರುದ್ಧ ವಿವಿಧ ರಾಜಕೀಯ ಶಕ್ತಿಗಳು ಒಗ್ಗೂಡುವುದು ಮಹತ್ವ ದೇಶದ ರಾಜಕೀಯ ಶಕ್ತಿಗಳ ಏಕನಿಲುವಿನ ಮೇಲೆ ಸ್ವಲ್ಪ ಪ್ರಭಾವವನ್ನು ಈಗಾಗಲೇ ಬೀರಿದೆ.

ಆರ್ಥಿಕಸ್ವರೂಪದ ಬೇಡಿಕೆಗಳು ಮತ್ತು ಟ್ರೇಡ್‌ಯೂನಿಯನ್, ಕಿಸಾನ್ ಸಭೆಗಳು ಮತ್ತಿತರ ಸಾಮೂಹಿಕ ಸಂಘಟನೆಗಳು ನಡೆಸುವ ಹೋರಾಟಗಳ ವಿಚಾರದಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳಲ್ಲಿ ತೀವ್ರವಾಗಿ ಬೆಳೆಯುತ್ತಿರುವ ಐಕ್ಯಕಾರ್ಯಾಚರಣೆಯನ್ನು ಕೆಲವು ರಾಜಕೀಯ ಪ್ರಶ್ನೆಗಳ ವಿಚಾರಕ್ಕೂ ವಿಸ್ತರಿಸಬಹುದೆಂಬುದನ್ನು ಈ ಬೆಳವಣಿಗೆಗಳು ತೋರಿಸುತ್ತವೆ. ಗೋಹತ್ಯೆ ನಿಷೇಧದ ಬಗ್ಗೆ ವಿವಿಧ ಪ್ರಜಾಸತ್ತಾತ್ಮಕ ಶಕ್ತಿಗಳು ಒಗ್ಗೂಡುವುದರ ಪ್ರಾಮುಖ್ಯತೆಯನ್ನು ಅಲ್ಲಗಳೆಯುವುದು ಮೂರ್ಖತನವಾಗುತ್ತದೆ. ಅಲ್ಲದೆ, ರಾಜಕೀಯ ಮತ್ತು ಆರ್ಥಿಕ ಸಂಗತಿಗಳ ಬಗ್ಗೆ ಐಕ್ಯಕಾರ್ಯಾಚರಣೆಯ ಕ್ಷೇತ್ರವು ವಿಶಾಲವಾಗುವುದಕ್ಕೆ ಒಳ್ಳೆಯ ಅವಕಾಶಗಳಿವೆ ಎಂಬುದನ್ನು ಒಪ್ಪದಿರುವುದೂ ತಪ್ಪಾಗುತ್ತದೆ.

ಪ. ಬಂಗಾಳ ಮತ್ತು ಕೇರಳಗಳ ಸರ್ಕಾರಗಳು ಮತ್ತು ಇತರ ಪಕ್ಷಗಳು ಗುಂಪುಗಳು ಮತ್ತು ವ್ಯಕ್ತಿಗಳ ಐಕ್ಯ ಕಾರ್ಯಾಚರಣೆಯ ರಾಜಕೀಯ ಪರಿಣಾಮಗಳ ವಿಮರ್ಶೆ ಮಾಡುವುದಕ್ಕೆ, ಕಳೆದ ಏಪ್ರಿಲ್ ಉತ್ತರಾರ್ಧದಲ್ಲಿ ನಡೆದ ಕೆಲವು ಬೆಳವಣಿಗೆಗಳ ಪ್ರಸ್ತಾಪ ಮಾಡುವುದು ಅಗತ್ಯವಾಗಿದೆ.

ವಿನೋಬಾ ಅವರು ಉಪವಾಸ ನಡೆಸುತ್ತಿದ್ದ ಸಮಯದಲ್ಲೇ ನಡೆದ ಅಖಿಲಭಾರತ ಕಾಂಗ್ರೆಸ್ (ಐ) ಸಮಿತಿಯ ಮತ್ತು ಸ್ವರಣ್‌ಸಿಂಗ್ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಗಳನ್ನು ನಾವು ಉದ್ದೇಶಿಸಿದ್ದೇವೆ. ಇದರ ಜೊತೆಗೆ ವಿಪರೀತ ಆಂತರಿಕ ಬಿಕ್ಕಟ್ಟಿನ ಘಟ್ಟವನ್ನು ಮುಟ್ಟಿರುವ ಜನತಾಪಕ್ಷದೊಳಗಿನ ಕಲಹಗಳನ್ನೂ ನಾವು ಗಮನಿಸಬೇಕು.

ವಿನೋಬಾ ಉಪವಾಸದ ಬಗ್ಗೆ ಐಕ್ಯಕಾರ್ಯಾಚರಣೆ ನಡೆದ ಹಾಗೆ ಇವೆಲ್ಲವೂ ಏಕಕಾಲಕ್ಕೆ ನಡೆದಿರುವುದರಿಂದ ದೇಶದ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ನಡುವಿನ ಐಕ್ಯಕಾರ್ಯಾಚರಣೆಗೆ ಸಾಧ್ಯತೆಗಳು ಇನ್ನೂ ವಿಶಾಲಗೊಂಡಿವೆ.

ಇನ್ನೇನು ಸಫಲವಾಗಲಿದೆ ಎಂದೆನಿಸಿದ್ದ ಎರಡೂ ಪಕ್ಷಗಳ ಐಕ್ಯತೆ ಈಗ ಪೂರ್ಣವಾಗಿ ವಿಫಲಗೊಂಡಿದೆ ಎಂಬುದನ್ನು ಅಖಿಲಭಾರತ ಕಾಂಗ್ರೆಸ್ (ಐ) ಸಮಿತಿ ಮತ್ತು (ಸ್ವರಣ್) ಕಾಂಗ್ರೆಸ್ ಕಾರ್ಯಕಾರಿ ಸಮಿತಿಗಳ ಸಭೆಗಳು ತೋರಿಸಿಕೊಟ್ಟಿವೆ. "ಐಕ್ಯತೆ"ಯ ಧುರೀಣರಾಗಿದ್ದ ಕಾಂಗ್ರೆಸ್‌ನ ಸ್ವರಣ್ ಸಿಂಗ್ ಮತ್ತು ಕಾಂಗ್ರೆಸ್ (ಐ) ನ ಮುಖ್ಯಮಂತ್ರಿ ದೇವರಾಜ ಅರಸ ಅವರಿಬ್ಬರೂ ಈಗ "ಐಕ್ಯತೆ" ಆಗದಿದ್ದುದು ಒಳ್ಳೆಯದೇ ಎಂದು ಹೇಳುತ್ತಿದ್ದಾರೆ. ತಮ್ಮ ತಮ್ಮ ಪಕ್ಷದ ಸಂಘಟನೆಗಳ ಪ್ರತ್ಯೇಕತೆ ಮತ್ತು ಶಕ್ತಿಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಈಗ ಎರಡೂ ಕಾಂಗ್ರೆಸ್‌ಗಳ ನಾಯಕರು ಪ್ರಯತ್ನ ಮಾಡುತ್ತಾರೆ. ತನ್ನ ಜನಪ್ರಿಯತೆ ಮತ್ತು ದಕ್ಷತೆಗಳನ್ನು ಕಳೆದುಕೊಳ್ಳುತ್ತಿರುವ ಜನತಾಪಕ್ಷಕ್ಕೆ ಪರ್ಯಾಯವನ್ನು ಒದಗಿಸಬಲ್ಲಂಥ "ಪುನಃ ಐಕ್ಯಗೊಂಡ" ಕಾಂಗ್ರೆಸ್ಸಿನ ಸಾಧ್ಯತೆ ಹೀಗಾಗಿ ಮುಗಿದು ಹೋಗಿದೆ.

ಕಾಂಗ್ರೆಸ್ (ಐ) ಒಳಜಗಳ :

ಅಖಿಲಭಾರತ ಕಾಂಗ್ರೆಸ್ (ಐ) ಸಮಿತಿಯ ಸಭೆಯಲ್ಲಿ ಪಕ್ಷದ ಒಳಗಿನ ಒಂದು ಆಂತರಿಕ ಹೋರಾಟ ವ್ಯಕ್ತವಾಗಿತ್ತು. ಕರ್ನಾಟಕದ ಮುಖ್ಯಮಂತ್ರಿ ದೇವರಾಜ ಅರಸು, ಶ್ರೀಮತಿ ತಾರಕೇಶ್ವರಿ ಸಿನ್ಹ ಮುಂತಾದ ಪಕ್ಷದ ಮುಂದಾಳುಗಳೊಡನೆ ಅಧ್ಯಕ್ಷೆ ಇಂದಿರಾಗಾಂಧಿ ಅವರು ಬಹಿರಂಗವಾಗಿ ಕಲಹ ನಡೆಸಿದರು.

ಪಕ್ಷದ ನಾಯಕತ್ವದಲ್ಲಿ ಸಂಜಯ ಗಾಂಧಿ ಮತ್ತು ಅವರ ಕೂಟದ ಪಾತ್ರ ಹೆಚ್ಚುತ್ತಿರುವುದರ ಬಗ್ಗೆಯೇ ಇಬ್ಬರೂ ಮಾತೆತ್ತಿದರು. ಅಧ್ಯಕ್ಷರು ಇದನ್ನು ತಡೆಗಟ್ಟಲು ಕ್ರಮ ಕೈಗೊಳ್ಳದಿದ್ದರೆ ಪಕ್ಷವು ಒಡಕನ್ನೆದುರಿಸಬೇಕಾಗುವುದೆಂದು ಇಬ್ಬರೂ ಸ್ಪಷ್ಟ ಎಚ್ಚರಿಕೆ ಕೊಟ್ಟರು.

ಇ.ಎಂ.ಎಸ್. ನಂಬೂದಿರಿಪಾಡ್

ಅರಸು ಮತ್ತು ಶ್ರೀಮತಿ ಸಿನ್ಹ ಅವರು ವೈಯಕ್ತಿಕವಾದ ತಮ್ಮ ಅಭಿಪ್ರಾಯವನ್ನಲ್ಲದೆ ಪಕ್ಷದ ಇನ್ನೂ ಅನೇಕರ ಅನಿಸಿಕೆಯನ್ನೇ ಹೇಳುತ್ತಿದ್ದಾರೆಂಬ ಅಂಶವು ಎರಡು ದಿನಗಳ ಅಖಿಲಭಾರತ ಕಾಂಗ್ರೆಸ್ (ಐ) ಸಮಿತಿಯ ಸಭೆಯ ಕಲಾಪಗಳಲ್ಲಿ ಮತ್ತು ನಂತರದ ಬೆಳವಣಿಗೆಗಳಲ್ಲಿ ಗೊತ್ತಾಯಿತು. ಈ ಸಭೆಯಲ್ಲಿ ಬಂದಹಾಗೆ ಹಿಂದೆಂದೂ ಕಾಂಗ್ರೆಸ್ (ಐ)ನ ಒಳಜಗಳ ಇಷ್ಟು ಹೊರಗೆ ಬಂದಿರಲಿಲ್ಲ.

ತಮ್ಮ ಪಕ್ಷದ ಉನ್ನತ ನಾಯಕತ್ವದಲ್ಲೇ ಹೀಗೆ ಆಗುತ್ತಿರುವಾಗ, ಶ್ರೀಮತಿ ಗಾಂಧಿಯವರು ಇತರ ಎಲ್ಲ ಪಕ್ಷಗಳನ್ನು ಮತ್ತು ಪಕ್ಷಗಳ ಕೂಟವನ್ನು ಖಿಚಡಿ ಎಂದು ಅಲ್ಲಗಳೆಯುವುದು ತಮಾಷೆಯ ವಿಚಾರವಾಗಿದೆ. ಅವರ ಐಕ್ಯವಾಗಿದ್ದ ಪಕ್ಷವೂ ಖಿಚಡಿಯಾಗಿರಲಿಲ್ಲವೇ ಎಂದು ನಾವು ಅವರನ್ನು ಕೇಳಬಹುದು. ಈ ಕಾರಣಕ್ಕಾಗಿಯೇ ಅಲ್ಲವೇ ಅವರ ಪಕ್ಷ 1969 ರಲ್ಲಿ, 1978ರಲ್ಲಿ ಎರಡೆರಡು ಬಾರಿ ಒಡೆದು ಈಗ ಒಡಕಿನ ಅಂಚಿನಲ್ಲಿ ಮತ್ತೆ ನಿಂತಿರುವುದು ?

ಖಿಚಡಿ ಎಂದು ಅವರು ಕರೆಯುವ ಈ ಮಿಶ್ರಣವು ಒಂದು ಕಡೆ ಅವರ ಪಕ್ಷವನ್ನೂ ಇನ್ನೊಂದು ಕಡೆ ಆರೆಸ್ಸೆಸ್ ಪಕ್ಷವನ್ನೂ ವಿರೋಧಿಸುತ್ತದೆ. ಅದು ಅನೇಕ ಮೂಲಭೂತ ವಿಚಾರಗಳ ಬಗ್ಗೆ ಭಿನ್ನತೆ ಹೊಂದಿದ್ದರೂ, ಕೆಲವು ಪ್ರಮುಖ ನೀತಿಗಳ ಪ್ರಶ್ನೆಗಳಲ್ಲಿ ಒಪ್ಪಂದ ಹೊಂದಿರುವ ಪಕ್ಷಗಳ ಮತ್ತು ಗುಂಪುಗಳ ಮಿಶ್ರಣವೆಂದು ಪ್ರಾಮಾಣಿಕವಾಗಿ ಹೇಳಲಾಗಿದೆ. ಶ್ರೀಮತಿ ಗಾಂಧಿ ತಮ್ಮ ಪಕ್ಷ ಖಿಚಡಿ ಅಲ್ಲವೆಂದು ಹೇಳುತ್ತಾರೆ. ಆದರೆ ಪಕ್ಷವನ್ನು ಮತ್ತೆ ಮತ್ತೆ ಒಡೆಯುವಂಥ ತೀವ್ರ ಆಂತರಿಕ ಸಂಘರ್ಷದಲ್ಲಿ ಅದು ಸಿಕ್ಕಿಹಾಕಿಕೊಂಡಿದೆ.

ದಕ್ಷ ಆಡಳಿತವನ್ನು ನೀಡುತ್ತೇವೆಂದು ಹೇಳಿದ್ದ ಜನತಾಪಕ್ಷದ ಬಣ್ಣ ಬಯಲಾಗಿರುವುದರಿಂದ, ಆ ಪಕ್ಷಕ್ಕೆ ಬದಲು ನಿಜವಾದ ಪರ್ಯಾಯವನ್ನು ನೀಡುತ್ತೇವೆಂದು ಹೇಳಿಕೊಂಡ ಕಾಂಗ್ರೆಸ್ (ಐ)ನ ಬುಡವಿಲ್ಲದ ಮಾತನ್ನು ಈ ಕಲಹಗಳು ಮತ್ತು ಸಂಘರ್ಷಗಳು ಸುಳ್ಳು ಮಾಡುತ್ತವೆ. ಹಿಂದಿನ ಐಕ್ಯ ಕಾಂಗ್ರೆಸ್ಸಿಗಿದ್ದಂತೆ ಈ ಕಾಂಗ್ರೆಸ್ (ಐ)ಗೂ ಕೊಳೆತ ಮತ್ತು ಛಿದ್ರತೆಗಳೇ ಹಣೆಬರಹವಾಗಿವೆ.

(ಸ್ವರಣ್) ಕಾಂಗ್ರೆಸ್ ಮುಂದಿರುವ ಪ್ರಶ್ನೆ :

ಕಾಂಗ್ರೆಸ್ (ಐ)ಗೆ ಆಗಿರುವಂತೆ ಒಡಕು, ಇನ್ನೊಂದು ಕಾಂಗ್ರೆಸ್‌ನ ಪ್ರಶ್ನೆ ಆಗಿಲ್ಲ. ಹಾಗೆ ನೋಡಿದರೆ ಒಡಕಿನ ಅಂಚಿಗೆ ಕೊಂಡೊಯ್ಯುತ್ತಿದ್ದ ಆಂತರಿಕ ಕಲಹದಿಂದ ಅದು ಆಚೆಗೆ ಬಂದಿದೆ. ತಮ್ಮ ನಿಯಮಗಳ ಪ್ರಕಾರ ನಡೆಯದಿದ್ದರೆ ಐಕ್ಯತೆಯಿಂದ ನಮಗೇನೂ ಲಾಭವಿಲ್ಲ ಎಂದು ಕಾಂಗ್ರೆಸ್ (ಐ) ಮತ್ತು ಅದರ ಅಧ್ಯಕ್ಷರು ಹೇಳಿರುವುದರಿಂದ ಕಾಂಗ್ರೆಸ್ಸಿನ ನಾಯಕತ್ವದ ಐಕ್ಯತಾ "ಪರವಾದಿ"ಗಳು ಮತ್ತು "ವಿರೋಧಿ"ಗಳು ಒಂದಾಗಿದ್ದಾರೆಯೇ ಹೊರತು ತಮ್ಮಲ್ಲಿನ ಭಿನ್ನಾಭಿಪ್ರಾಯಗಳ ಸರಿಪಡಿಸುವಿಕೆಯಿಂದ ಅಲ್ಲ.

ಆದರೆ ಇಷ್ಟರಿಂದ ಅವರ ಆಂತರಿಕ ರಾಜಕೀಯ ಹೋರಾಟ ಮುಗಿಯುವುದಿಲ್ಲ. ಅಂತಿಮ ನಿರ್ಣಯಗಳಿಗೆ ತಲುಪುವ ಚರ್ಚೆಯಲ್ಲಿ ನೀತಿಗೆ ಸಂಬಂಧಿಸಿದ ಪ್ರಶ್ನೆಗಳು ಮತ್ತೆ ಚರ್ವಿತ ಚರ್ವಣವಾಗಬಹುದು.

ಕಾಂಗ್ರೆಸ್ಸಿನ ನಾಯಕತ್ವವು ಭಿನ್ನತೆ ಹೊಂದಿರುವ ಒಂದು ಸಂಘಟನಾತ್ಮಕ ಪ್ರಶ್ನೆ ಎಂದರೆ, "ಐಕ್ಯತೆ"ಯ ಮಾತುಕತೆ ಈಗ ವಿಫಲವಾಗಿರುವುದರಿಂದ, "ಐಕ್ಯತೆ"ಯನ್ನು ಪ್ರೇರೇಪಿಸಿದ್ದನ್ನು ಮುಂದಕ್ಕೆ ಒಡ್ಡಿದ ನಾಯಕರನ್ನು ಈಗ ಉಳಿಸಿಕೊಳ್ಳಬೇಕೆ ಅಥವಾ ಬದಲಾಯಿಸಬೇಕೆ ಎಂಬುದು. ಈ ಸಂಘಟನಾತ್ಮಕ ಪ್ರಶ್ನೆ ಅಲ್ಲದೆ, ಈಗ ಎದುರಾಗಿರುವ ಇನ್ನೊಂದು ರಾಜಕೀಯ ಪ್ರಶ್ನೆ, ಕಾಂಗ್ರೆಸ್ ಮತ್ತು ಇತರ ಸರ್ವಾಧಿಕಾರ ವಿರೋಧಿ, ವಿಚಾರವಾದಿ, ಪ್ರಜಾಪ್ರಭುತ್ವವಾದಿ ಶಕ್ತಿಗಳ ನಡುವೆ ಇರಬೇಕಾದ ಸಂಬಂಧವನ್ನು ಕುರಿತದ್ದು.

ಕಾಂಗ್ರೆಸ್ (ಐ)-ಕಾಂಗ್ರೆಸ್ ಸಂಯುಕ್ತ ಸರ್ಕಾರವನ್ನು ಬೇರುಸಹಿತ ಒಗೆದು, ಜನತಾ ಪಕ್ಷದೊಡನೆ ಸೇರಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವೂ ಸೇರಿದಂತೆ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಸಹಾನುಭೂತಿ ಪಡೆದು ಹೊಸ ಸಂಯುಕ್ತ ಸರ್ಕಾರವನ್ನು ಸ್ಥಾಪಿಸಿದ ಮಹಾರಾಷ್ಟ್ರದ ಶರದ್ ಪವಾರ್ ಮತ್ತು ಇತರ ಕಾಂಗ್ರೆಸ್ಸಿಗರ ಬಗ್ಗೆ ಅನೇಕ ಕಾಂಗ್ರೆಸ್ ಪರಿಷ್ಕರು ಒಳಗೊಳಗೇ ಸಹಾನುಭೂತಿ ಇದ್ದಾರೆಂಬುದು ಎಲ್ಲರಿಗೂ ಗೊತ್ತಿದೆ. ಆದರೆ ಶರದ್‌ಪವಾರ್ ಮತ್ತು ಅವರ ಸಹೋದ್ಯೋಗಿಗಳನ್ನು ಸಂಸ್ಥೆಯಿಂದ ಉಚ್ಚಾಟಿಸಿದ ನಾಯಕರು ಈ ಸಹಾನುಭೂತಿಯನ್ನು ಅಧಿಕೃತವಾಗಿ ಒಪ್ಪಿಕೊಳ್ಳುತ್ತಿಲ್ಲ.

ಪವಾರ್ ಸರ್ಕಾರದ ಬಗ್ಗೆ ಈ ಧೋರಣೆಯನ್ನು ಮುಂದುವರೆಸಬೇಕೆ ಅಥವಾ "ಮಹಾರಾಷ್ಟ್ರದ ಮಾದರಿ" ಇತರ ರಾಜ್ಯಗಳಲ್ಲೂ ನಡೆಯುವುದಕ್ಕೆ ಪ್ರೇರಕವಾಗಿ ಆ ಧೋರಣೆ ಬದಲಾಗಬೇಕೆ ಎಂಬ ಗಂಭೀರ ಪ್ರಶ್ನೆಯ ಬಗ್ಗೆ ನಾಯಕರು ಆದಷ್ಟು ಬೇಗ ಗಮನ ಹರಿಸಬೇಕು. ಈ ನಿರ್ಣಯಕ್ಕೆ ಬರುವುದು ತಡವಾದರೆ ಕಲಹಗಳು ಬೆಳೆದು ಕೊನೆಗೆ ಪಕ್ಷ ಒಡೆಯುವ ಸೂಚನೆಗಳಿವೆ.

ಜನತಾ ನಾಯಕತ್ವದ ಸದ್ದುಗದ್ದಲಗಳು :

ಸ್ವರಣ್ ಕಾಂಗ್ರೆಸ್ಸಿನ ನಾಯಕರು ಈ ಪ್ರಶ್ನೆಯನ್ನು ಗಮನಿಸುವಾಗ, ಜನತಾ ನಾಯಕತ್ವದೊಳಗಿನ ಸದ್ದುಗದ್ದಲಗಳ ಬಗ್ಗೆಯೂ ದೃಷ್ಟಿಹರಿಸುವುದು ಅಗತ್ಯವಾಗಿದೆ. ಜನಸಂಘ ಮತ್ತು ಬಿ ಎಲ್ ಡಿ ಗಳ ಸುತ್ತ ರೂಪುಗೊಳ್ಳುತ್ತಿರುವ ಎರಡು ಬಣಗಳಿಂದ ಜನತಾಪಕ್ಷ ಒಡೆಯುವುದೇನೋ ಎಂಬ ಪ್ರಶ್ನೆ ಇನ್ನೂ ಹಾಗೇ ಉಳಿದಿದೆ.

ಜನತಾ ಸರ್ಕಾರದೊಳಗೆ ಆರೆಸ್ಸೆಸ್ ವಹಿಸುತ್ತಿರುವ ಪಾತ್ರದ ಬಗ್ಗೆ ತೀವ್ರ ಆಂತರಿಕ ಹೋರಾಟ ನಡೆಯುತ್ತಿರುವುದು ವಾಸ್ತವ ಸಂಗತಿಯಾಗಿದೆ. ಉತ್ತರ ಪ್ರದೇಶ, ಬಿಹಾರ, ಹರಿಯಾಣ ಮತ್ತು ಹಿಮಾಚಲ ಪ್ರದೇಶ ವಿಧಾನಸಭೆಗಳಲ್ಲಿ ನಡೆದ ಚಟುವಟಿಕೆಗಳು, ಜನತಾಪಕ್ಷದಲ್ಲಿ ಆರೆಸ್ಸೆಸ್‌ನ ಪಾತ್ರದ ಬಗ್ಗೆ ಉಪಪ್ರಧಾನಿ ಚರಣ್ ಸಿಂಗ್ ಅವರು ಪಕ್ಷದ ಅಧ್ಯಕ್ಷ ಚಂದ್ರಶೇಖರ್ ಅವರಿಗೆ ಬರೆದ ಪತ್ರ ಇವೆಲ್ಲವೂ ಆಯಾ ವ್ಯಕ್ತಿಗಳ ಸ್ವಂತ ಉದ್ದೇಶಗಳಿದ್ದರೂ ಸಹ, ಜನತಾಪಕ್ಷದೊಳಗೆ ಆರೆಸ್ಸೆಸ್‌ನ ವಿರೋಧಿಗಳು ನೀತಿಯ ಬಗ್ಗೆ ಒಂದು ಪ್ರಮುಖ ಪ್ರಶ್ನೆಯನ್ನು

[5ನೇ ಪುಟ ನೋಡಿ]

ಸರ್ವಾಧಿಕಾರ ವಿರೋಧಿ, ಪುನಶ್ಚೇತನ ವಿರೋಧಿ ಶಕ್ತಿಗಳ ಐಕ್ಯ ಹೋರಾಟಕ್ಕೆ ಪಾಲಿಟ್‌ಬ್ಯೂರೋ ಸ್ವಾಗತ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ಏಪ್ರಿಲ್ 26 ರಂದು ನವದೆಹಲಿಯಲ್ಲಿ ಪತ್ರಿಕೆಗಳಿಗೆ ಈ ಕೆಳಗಿನ ಹೇಳಿಕೆಯನ್ನು ಕೊಟ್ಟಿತು :

ಜೆಮ್‌ಶೆಡ್‌ಪುರದಲ್ಲಿ ನಡೆದ ಮತೀಯ ಕಲಹಗಳು, ಜಾತ್ಯಾತೀತತೆ ಮತ್ತು ಪ್ರಜಾಪ್ರಭುತ್ವಕ್ಕೆ ಆರೆಸ್ಸೆಸ್ ತರುವ ಅಪಾಯಗಳನ್ನು ಮತ್ತೆ ಎತ್ತಿ ತೋರಿಸುತ್ತವೆ. ಆಳುವ ಜನತಾ ಪಕ್ಷವೂ ಸೇರಿದಂತೆ, ಎಲ್ಲ ರಾಜಕೀಯ ಪಕ್ಷಗಳು ಕಳುಹಿಸಿದ ನಿಯೋಗಗಳ ಅಧ್ಯಯನದ ಪ್ರಕಾರ, ಈ ಉಕ್ಕಿನ ನಗರದಲ್ಲಿ ನಡೆದ ದುರಂತ ಘಟನೆಗಳೆಲ್ಲವೂ ಆರೆಸ್ಸೆಸ್‌ನ ಯೋಜಿತ ಕುತಂತ್ರದ ಫಲವಾಗಿದೆ ಎಂಬುದು ಸ್ಪಷ್ಟವಾಗಿದೆ. ಅಲಿಘರ್‌ನ ದಂಗೆಗಳಲ್ಲಿ ನಡೆದಹಾಗೆ, ಜೆಮ್‌ಶೆಡ್‌ಪುರದಲ್ಲಿ ನಡೆದ ಗಲಭೆಯ ನೇತೃತ್ವ ವಹಿಸಿದವನು ಒಬ್ಬ ಆರೆಸ್ಸೆಸ್ ನಾಯಕನೇ. ಆತ ಸ್ಥಳೀಯ ಜನತಾ ಪಕ್ಷದ ವಿಧಾನಸಭಾ ಸದಸ್ಯ ಕೂಡಾ.

ಜೆಮ್‌ಶೆಡ್‌ಪುರ ಬೆಳವಣಿಗೆಗಳ ವಾಸ್ತವ ಅಧ್ಯಯನ ಮಾಡಿದ ನಿಯೋಗಗಳ ವರದಿಗಳೆಲ್ಲವೂ, ಆಡಳಿತ ಯಂತ್ರದ ತಪ್ಪುಗಳ ಬಗ್ಗೆ ಬೆರಳು ತೋರಿಸುತ್ತವೆ. ಸ್ಥಳೀಯ ಅಧಿಕಾರಿಗಳಲ್ಲಿ ಕೆಲವರು ದಂಗೆಯನ್ನು ಹತ್ತಿಕ್ಕಲು ನಿರತರಾಗಿದ್ದರೆ ಮತ್ತೆ ಕೆಲವರು ಮರೆಯಲ್ಲಿ ದಂಗೆಯ ವ್ಯವಸ್ಥಾಪಕರ ಜೊತೆ ಕೆಲಸಮಾಡುತ್ತಿದ್ದರು. ಅಲ್ಪಸಂಖ್ಯಾತ ಕೋಮನ್ನೇ ಗುರಿಯಾಗಿಟ್ಟುಕೊಂಡಿದ್ದ ಕೊಲೆ, ಸುಲಿಗೆ, ಮನೆಗೆ ಬೆಂಕಿ ಮುಂತಾದ ಅಮಾನುಷ ಕೃತ್ಯಗಳಲ್ಲಿ ಬಿಹಾರದ ಮಿಲಿಟರಿ ಪೋಲೀಸರೂ ಹೆಚ್ಚುಕಡಿಮೆ ಆರೆಸ್ಸೆಸ್‌ನ ಜೊತೆಗಿದ್ದರು.

ಪಕ್ಷದ ಆಂತರಿಕ ಪರಿಸ್ಥಿತಿಯಿಂದಾಗಿ, ಆರೆಸ್ಸೆಸ್‌ನ ಪ್ರಭಾವದೊಳಗಿಲ್ಲದ ರಾಜಕೀಯ ನಾಯಕರೂ ಈ ಬಗ್ಗೆ ಕೈಚೆಲ್ಲಿ ಕುಳಿತದ್ದರಿಂದ, ಜನತಾ ಸರ್ಕಾರ ತನ್ನ ಜವಾಬ್ದಾರಿ ನಿರ್ವಹಣೆಯಲ್ಲಿ ಸೋತಿತು.

ಮತೀಯ ಕಲಹಗಳನ್ನು ಪ್ರೋತ್ಸಾಹಿಸುವಲ್ಲಿ ಟಾಟಾ ಆಡಳಿತ ವಹಿಸಿದ ಪಾತ್ರವನ್ನೂ ಇಲ್ಲಿ ಹೆಸರಿಸಬೇಕು.

ಜೆಮ್‌ಶೆಡ್‌ಪುರ ಕಲಹಗಳು ತೋರಿದ ಸಂಗತಿಗಳು ಭಾರತದ ಪ್ರತಿ ದೇಶಭಕ್ತ ಪ್ರಜೆಯನ್ನೂ ಎಚ್ಚರಿಸಿ, ಹಿಂದೂ ಪುನಶ್ಚೇತನವಾದ ಮತ್ತು ವಿನಾಶದ ಸಂಕೇತವಾದ ಆರೆಸ್ಸೆಸ್‌ನ ವಿರುದ್ಧ ಹೋರಾಡುವ ತುರ್ತು ಅಗತ್ಯವನ್ನು ಪ್ರತಿಯೊಬ್ಬರಿಗೂ ಮನಗಾಣಿಸಬೇಕು.

ಪ್ರತಿಯೊಬ್ಬ ದೇಶಪ್ರೇಮಿ ಭಾರತೀಯನೂ ಅಲ್ಪಸಂಖ್ಯಾತರನ್ನು ರಕ್ಷಿಸುವುದರ ಬಗ್ಗೆ ಗಮನ ಹರಿಸಬೇಕಾಗಿರುವ ಈ ದುರಂತ ಸಂದರ್ಭದಲ್ಲಿ, ವಿನೋಬಾಭಾವೆಯಂಥ ಗೌರವಾರ್ಹ ರಾಷ್ಟ್ರೀಯ ನಾಯಕರು, ಅರ್ಧ ಶತಮಾನದಿಂದಲೂ ಹಿಂದೂ ಮತೀಯವಾದದ ರಣಕಹಳೆಯಾಗಿರುವ ಗೋಹತ್ಯಾ ನಿಷೇಧದ ವಿಚಾರವನ್ನು ಎತ್ತಿರುವುದು ಖಂಡನಾರ್ಹವಾಗಿದೆ. ಕೋಮು ಗಲಭೆಗಳನ್ನು ಅವರ ಉಪವಾಸ ಕಡಿಮೆ ಮಾಡುವುದರ ಬದಲು ಇನ್ನಷ್ಟು ವೇಗದಲ್ಲಿ ಹೆಚ್ಚಿಸುತ್ತದೆ. ಆದ್ದರಿಂದ ಉಪವಾಸ ನಿಲ್ಲಿಸುವಂತೆ ವಿನೋಬಾ ಅವರಿಗೆ ಪಾಲಿಟ್‌ಬ್ಯೂರೋ ಮನವಿ ಮಾಡಿಕೊಳ್ಳುತ್ತದೆ ಮತ್ತು ಮಹಾತ್ಮಾಗಾಂಧಿಯವರು ತಮ್ಮ ಕಡೆಯ ದಿನಗಳಲ್ಲಿ ಮಾಡಿದಂತೆ, ಇವರೂ ತಮ್ಮ ಶಕ್ತಿಯನ್ನು ಮತ್ತು ಜನಪ್ರಿಯತೆಯನ್ನು ಕೋಮುಕಲಹಗಳನ್ನು ನಿಲ್ಲಿಸುವುದರಲ್ಲಿ ವಿನಿಯೋಗಿಸಬೇಕೆಂದು ಕೋರುತ್ತದೆ.

ಸಂಸತ್ತಿನ ಉಭಯಸದನಗಳ ಪಕ್ಷಗಳು ಮತ್ತು ಗುಂಪುಗಳನ್ನು ಪ್ರತಿನಿಧಿಸುವ ಲೋಕಸಭಾಸದಸ್ಯರ ಒಂದು ನಿಯೋಗವು (ಕಾಂಗ್ರೆಸ್ (ಐ)ನ ನಾಯಕರು ಮಾತ್ರ ಕೊನೆಗಳಿಗೆಯಲ್ಲಿ ಬರಲಿಲ್ಲ) ಪೌನಾರ್ ಆಶ್ರಮಕ್ಕೆ ಹೋಗಿ, ಉಪವಾಸ ಮಾಡದಿರುವಂತೆ ವಿನೋಬಾ ಅವರಿಗೆ ಮನವಿ ಮಾಡಿದ್ದನ್ನು ಪಾಲಿಟ್‌ಬ್ಯೂರೋ ನೆನೆಸಿಕೊಳ್ಳುತ್ತದೆ. ಹಾಗೆಯೇ ಪಶ್ಚಿಮ ಬಂಗಾಳ ಮತ್ತು ಕೇರಳಗಳ ಮುಖ್ಯಮಂತ್ರಿಗಳು ಒಟ್ಟಾಗಿ ಸೇರಿ ಉಪವಾಸ ಕೈಗೊಳ್ಳದಿರುವಂತೆ ಕೋರಿ, ಎಲ್ಲ ದನಗಳನ್ನು ಕೊಲ್ಲದಿರುವಂತೆ ನಿಷೇಧಿಸುವ ಈಗಿನ ಕಾನೂನನ್ನು ಮತ್ತಷ್ಟು ಬಿಗಿಗೊಳಿಸುವ ಭರವಸೆ ನೀಡಿದ್ದರು. ಗೋಹತ್ಯೆ ನಿಷೇಧವನ್ನು ಬೆಂಬಲಿಸುವ ಅನೇಕ ಸಂಸ್ಥೆಗಳು ಮತ್ತು ವ್ಯಕ್ತಿಗಳು, ದೇಶದ ಇತಿಹಾಸದ ಇಂಥ ಬಿಕ್ಕಟ್ಟಿನ ಸಮಯದಲ್ಲಿ ಈ ವಿಚಾರದ ಬಗ್ಗೆ ಒತ್ತಾಯಿಸಿ ಬಿಸಿಪರಿಸ್ಥಿತಿಯನ್ನು ಉಂಟುಮಾಡದಿರಲು ಅವರಿಗೆ ಮನವಿ ಮಾಡಿದ್ದರು. ಆದರೆ ಈ ಮನವಿಗಳ್ಯಾವುದಕ್ಕೂ ಕಿವಿಗೊಡದೆ ವಿನೋಬಾ ಅವರು ಉಪವಾಸ ಮಾಡಿದ್ದು ಖಂಡನಾರ್ಹವಾಗಿದೆ.

ತನ್ನ ರಾಜಕೀಯ ಉದ್ದೇಶಗಳಿಗೆ ವಿನೋಬಾರ ಜೀವವನ್ನು ಪಣವಾಗಿಡುವ ಉದ್ದೇಶವನ್ನು ಇಂದಿರಾ ನೇತೃತ್ವದ ಕಾಂಗ್ರೆಸ್ (ಐ) ಹೊಂದಿತ್ತೆಂಬುದು ಅದರ ಕ್ರಿಯೆಗಳಿಂದ ಸ್ಪಷ್ಟವಾಗುತ್ತದೆ. ಲೋಕಸಭೆಯಲ್ಲಿ ಅದರ ನಾಯಕರಾಗಿರುವ ಸಿ. ಎಂ. ಸ್ಟೀಫನ್ ಅವರು, ಉಪವಾಸ ಕೈಗೊಳ್ಳದಿರುವಂತೆ ಮನವಿ ಮಾಡಲಿಕ್ಕಾಗಿ ತೆರಳಲಿದ್ದ ಸಂಸತ್ ಸದಸ್ಯರ ನಿಯೋಗದೊಡನೆ ಹೋಗಲು ಮೊದಲು ಒಪ್ಪಿದ್ದು, ಕೊನೆಗಳಿಗೆಯಲ್ಲಿ ಹಿಂತೆಗೆದರು. "ಧಾರ್ಮಿಕ ಕಾರಣ" ಎಂದು ಕರೆಯಲಾದ ಈ ವಿಚಾರವನ್ನು ಬೆಂಬಲಿಸಿ ಒಂದು ದಿನ ಉಪವಾಸ ಮಾಡುವಂತೆ ಅದರ ಅಧ್ಯಕ್ಷರಾದ ಇಂದಿರಾಗಾಂಧಿಯವರು ತಮ್ಮ ಪಕ್ಷದ ಸಂಸತ್ ಸದಸ್ಯರಿಗೆ ಕರೆಕೊಟ್ಟರು. ಪಶ್ಚಿಮಬಂಗಾಳ, ಕೇರಳ ಮತ್ತು ಕೇಂದ್ರ ಸರ್ಕಾರಗಳ ವಿರುದ್ಧ ವಿನೋಬಾ-ಭಕ್ತರ ಉಪವಾಸಗಳನ್ನು ರಾಜಕೀಯ ಅಸ್ತ್ರಗಳನ್ನಾಗಿ ಇಂದಿರಾಗಾಂಧಿ ಮತ್ತು ಅವರ ಪಕ್ಷ ಬಳಸಿಕೊಳ್ಳುತ್ತಿದ್ದಾರೆಂಬ ನಿರ್ಣಯಕ್ಕೆ ಈ ಸಂಗತಿಗಳಿಂದ ತಲುಪಬಹುದು.

ದೇಶದ ಬಹುಸಂಖ್ಯೆಯು ಈ ಸಮಸ್ಯೆಗೊಂದು ಪರಿಹಾರ ಹುಡುಕಿ ವಿನೋಬಾ ಅವರ ಜೀವವುಳಿಸಬೇಕೆನ್ನುವುದರಲ್ಲಿ ಆಸಕ್ತಿ ತೋರಿತು ಎಂಬುದರ ಬಗ್ಗೆ ಪಾಲಿಟ್‌ಬ್ಯೂರೋ ಮೆಚ್ಚುಗೆ ವ್ಯಕ್ತಪಡಿಸುತ್ತದೆ. ಅವರ ಜೀವವೇನೋ ಅಮೂಲ್ಯವಾದುದು. ಬಹುಸಂಖ್ಯಾತ ಆಹಾರ ಪದ್ಧತಿಗಳು ಮತ್ತು ಸಂಸ್ಕೃತಿಯನ್ನು ಅಲ್ಪಸಂಖ್ಯಾತರ ಮೇಲೆ ಹೇರುವಂಥ ವಿಚಾರಕ್ಕೆ ಇತರ ಪ್ರಜಾಪ್ರಭುತ್ವವಾದಿ ಶಕ್ತಿಗಳು ಶಾಮೀಲಾಗದಿರುವಂತೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವೂ ಆಗಲು ಸಾಧ್ಯವಿಲ್ಲ. ಬಹುಸಂಖ್ಯಾತರ ಜೀವನವಿಧಾನವನ್ನು ಅಲ್ಪಸಂಖ್ಯಾತರ ಮೇಲೆ ಹೇರುವಂಥ ಕಾರ್ಯ ನಡೆಯದಿರಲಿ ಎಂಬುದರ ವಿಚಾರದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಾಗೆಯೇ, ಜನತಾ ಮತ್ತು ಎರಡೂ ಕಾಂಗ್ರೆಸ್ ಪಕ್ಷಗಳೂ ಸೇರಿದಂತೆ ಎಲ್ಲ ಪಕ್ಷಗಳಲ್ಲೂ ಆಸಕ್ತ ಜನರು ಹೆಚ್ಚಿಗೆ ಇದ್ದಾರೆಂದು ಪಾಲಿಟ್‌ಬ್ಯೂರೋ ನಂಬಿದೆ.

ಸರ್ವಾಧಿಕಾರವನ್ನು ಪ್ರತಿನಿಧಿಸುವ ಇಂದಿರಾ ಕಾಂಗ್ರೆಸ್ಸನ್ನು ಮತ್ತು ಹಿಂದೂ ಕೋಮುವಾದ ಮತ್ತು ಪುನಶ್ಚೇತನವಾದದ ಧುರೀಣತ್ವ ವಹಿಸಿದ ಆರೆಸ್ಸೆಸ್ ಇವೆರಡನ್ನೂ ವಿರೋಧಿಸುವ ಎಲ್ಲರೂ ಒಟ್ಟಿಗೆ ಸೇರಬೇಕಾಗಿರುವ ಅಗತ್ಯವನ್ನು ಜೆಮ್‌ಶೆಡ್‌ಪುರದ ಕೋಮು ಗಲಭೆಗಳು ಮತ್ತು

[6ನೇ ಪುಟ ನೋಡಿ]

ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಮುಂದಿರುವ ಕರ್ತವ್ಯ

[4ನೇ ಪುಟದಿಂದ]

ಎತ್ತಿದ್ದಾರೆಂಬುದನ್ನು ತೋರಿಸುತ್ತವೆ. ಸ್ವರಣ್‌ಸಿಂಗರ ಕಾಂಗ್ರೆಸ್ಸೂ ಸೇರಿದಂತೆ, ಸರ್ವಾಧಿಕಾರ ವಿರೋಧಿ ಶಕ್ತಿಗಳೆಲ್ಲವೂ ಜನತಾಪಕ್ಷದ ಈ ಆಂತರಿಕ ಹೋರಾಟದ ಬಗ್ಗೆ ಯಾವ ನಿಲುವು ತಳೆಯುತ್ತಾರೆಂಬ ಪ್ರಶ್ನೆಯು ಕಾಂಗ್ರೆಸ್ಸಿನ ಭವಿಷ್ಯವನ್ನೂ ರೂಪಿಸುತ್ತದೆ.

ಈ ಸಂದರ್ಭದಲ್ಲಿಯೇ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋವು ಏಪ್ರಿಲ್ 26ರ ಹೇಳಿಕೆಯಲ್ಲಿ ಸೂಚಿಸಿದ ಹಾಗೆ, ಕಾಂಗ್ರೆಸ್ ಮತ್ತು ಜನತಾಗಳೆರಡನ್ನೂ ಏಕ ಕಾಲದಲ್ಲಿ ಸಮಾನವಾಗಿ ವಿರೋಧಿಸುವ "ತೃತೀಯ ರಂಗ"ದ ಅವಶ್ಯಕತೆಯು, ದೇಶದ ಸದ್ಯದ ರಾಜಕೀಯ ಪರಿಸ್ಥಿತಿಯಲ್ಲಿ ಬೇಡವಾದದ್ದೆನಿಸುತ್ತದೆ.

ಹೆಚ್ಚು ಕಡಿಮೆ ಸಮಾನವಾದ ಬಲವುಳ್ಳ ಬೂರ್ಜ್ವಾ-ಭೂಮಾಲೀಕ ಪಕ್ಷಗಳು ಇದ್ದಾಗ ಮಾತ್ರ "ತೃತೀಯ ರಂಗ"ದ ಕಲ್ಪನೆ ಉಚಿತವಾಗಿದ್ದು ದುಡಿಯುವ ಜನತೆಯ ಎಲ್ಲ ಗುಂಪುಗಳ ಬೆಂಬಲ ಅದಕ್ಕೆ ಬೇಕಾಗುತ್ತದೆ.

1970ರಲ್ಲಿ ಇಂದಿರಾ ಗಾಂಧಿಯವರ ನೇತೃತ್ವದ ಕಾಂಗ್ರೆಸ್ ಸರ್ವಾಧಿಕಾರದತ್ತ ಮುನ್ನುಗ್ಗುತ್ತಿದ್ದು, ಅದನ್ನು ಮುಚ್ಚಿಹಾಕಿಕೊಳ್ಳಲು "ಗರೀಬಿ ಹಟಾವೊ" ಮುಂತಾದ ವಾಮವಾದಿ ಘೋಷಣೆಗಳನ್ನು ಕೊಟ್ಟಿತ್ತು. ಈ ಪಕ್ಷಕ್ಕೆ ವಿರೋಧವಾಗಿ ಬಲ ಪ್ರತಿಗಾಮಿ ಕಾರ್ಯಕ್ರಮಗಳನ್ನು ಕೊಟ್ಟ ಪಕ್ಷಗಳ "ಅದ್ಭುತ ಕೂಟ" ಇತ್ತು.

ಪ್ರಾಮಾಣಿಕವಾದ ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳು, ಇಂದಿರಾ ಕಾಂಗ್ರೆಸ್ಸಿನ ಈ "ಎಡ" ಘೋಷಣೆಗಳಿಂದ ಮೋಸ ಹೋಗದಂತೆ ಅಥವಾ ಬಲಪ್ರತಿಗಾಮಿ ಕಾರ್ಯಕ್ರಮವನ್ನು ಹೊಂದಿದ್ದ ಪಕ್ಷಗಳ ಜೊತೆ ಸೇರದಂತೆ, ವರ್ಗ ಮತ್ತು ರಾಜಕೀಯ ಎಚ್ಚರಿಕೆ ಆ ಸಮಯದಲ್ಲಿ ಬೇಕಾಗಿತ್ತು. ದುರಾದೃಷ್ಟದಿಂದ, ಈ ಎರಡು ಬೂರ್ಜ್ವಾ-ಭೂಮಾಲೀಕ ಕೂಟಗಳ ವಿರುದ್ಧ ಹೋರಾಡಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಅದರ ಕೆಲವು ವರ್ಗಸ್ನೇಹಿತರು ಒಬ್ಬಂಟಿಯಾಗಿ ಉಳಿದವು.

"ತೃತೀಯ ರಂಗ"ದ ಬಗ್ಗೆ ಇಂದು ಮಾತನಾಡುತ್ತಿರುವವರು, ಎರಡು ಬೂರ್ಜ್ವಾ-ಭೂಮಾಲೀಕ ಜನವಿರೋಧಿ ಸಬಲ ಕೂಟಗಳಿದ್ದ ಆ ಸಂದರ್ಭದಲ್ಲಿ ತೃತೀಯರಂಗದ ಅವಶ್ಯಕತೆ ಇದ್ದಾಗ ಆ ಕಲ್ಪನೆಯನ್ನು ಗೇಲಿಮಾಡಿದ್ದರು. ದೇಶಕ್ಕೆ ತುರ್ತುಪರಿಸ್ಥಿತಿಯನ್ನು ಹೇರಿದ ಆ ಬೂರ್ಜ್ವಾ-ಭೂಮಾಲೀಕ ಕೂಟವನ್ನು ಬೆಂಬಲಿಸುವುದರಲ್ಲಿ ನಾವೂ ಸೇರುವಂತೆ ಅವರು ನಮಗೆ ಉಪದೇಶಿಸಿದ್ದರು.

ಈ ನೀತಿಯ ದಿವಾಳಿತನ ಜನತೆಯ ಮುಂದೆ ಬಯಲಾದಾಗ ಅವರು "ತೃತೀಯ ರಂಗ"ದ ಬಾವುಟ ಎತ್ತಿ ಹಿಡಿದಿದ್ದಾರೆ: ಈ ಘಟ್ಟದಲ್ಲಿಯೂ ಅವರು ಸರ್ವಾಧಿಕಾರಿಗಳ ನಾಯಕರ ಬಗ್ಗೆಗಿಂತ ಸರ್ವಾಧಿಕಾರ ವಿರೋಧಿಯಾದ ಜನತಾಪಕ್ಷದ ಬಗ್ಗೆಯೇ ಹೆಚ್ಚು ಉಗ್ರರಾಗಿದ್ದಾರೆಂಬ ಸಂಗತಿಯನ್ನು ಮರೆಮಾಚಲು ಹೀಗೆ ಮಾಡುತ್ತಿದ್ದಾರೆ.

ಇವತ್ತಿನ ಕರ್ತವ್ಯ :

ಹಿಂದೆ ಆದದ್ದನ್ನು ಬಿಟ್ಟು ಬಿಡೋಣ. ಕಾಂಗ್ರೆಸ್ (ಐ)ನ ನಿಧಾನ ಕೊಳೆತ ಮತ್ತು ಸತ್ವದ ಛಿದ್ರತೆ, ಸರ್ವಾಧಿಕಾರ ವಿರೋಧಿ ಹೋರಾಟದಲ್ಲಿ ಜನತಾ ಪಕ್ಷಕ್ಕಿದ್ದ ಉನ್ನತ ಪ್ರತಿಷ್ಠೆಯ ಇಳಿತ ಇವುಗಳಿಂದ "ತೃತೀಯರಂಗ"ದ ಕಲ್ಪನೆ ಅಸಂಬದ್ಧವಾದದ್ದು ಎಂಬ ಅಂಶ ಅವರಿಗೆ ಈಗಲಾದರೂ ಅರಿವಾಗಿದೆಯೆ ?

ಎರಡು ಕಾಂಗ್ರೆಸ್‌ಗಳು, ಜನತಾ ಪಕ್ಷ ಈ ಮೂರೂ ಬೂರ್ಜ್ವಾ-ಭೂಮಾಲೀಕ ಪಕ್ಷಗಳು ತಮ್ಮನ್ನು ತಾವೇ ಎಂಥ ಬಿಕ್ಕಟ್ಟಿನಲ್ಲಿ ಇಳಿಸಿಕೊಂಡಿವೆ ಎಂದರೆ, ಅವುಗಳ ಸದಸ್ಯರು ಅನುಯಾಯಿಗಳನೇಕರು ಭ್ರಮನಿರಸನ ಹೊಂದಿ, ವಿಚಾರವಾದ ಮತ್ತು ಪ್ರಜಾಪ್ರಭುತ್ವವಾದದತ್ತ ಗಮನ ಹರಿಸುತ್ತಿದ್ದಾರೆ. ಮೂರೂ ಪಕ್ಷಗಳ ಈ ಗುಂಪುಗಳನ್ನು, ಸರ್ವಾಧಿಕಾರ ವಿರೋಧಿ ಮತ್ತು ಪ್ರಜಾಪ್ರಭುತ್ವವಾದಿ ತಳಹದಿಯ ಮೇಲೆ ಒಗ್ಗೂಡಿಸಿ, ಸಾಮೂಹಿಕ ಸಂಘಟನೆಗಳನ್ನು ಬಲಪಡಿಸುವುದಕ್ಕೆ ಮತ್ತು ಅವುಗಳ ನೇತೃತ್ವನಲ್ಲಿ ಹೋರಾಟಗಳನ್ನು ನಡೆಸುವುದಕ್ಕೆ ಈ ರಾಜಕೀಯ ಐಕ್ಯತೆಯನ್ನು ಬಳಸಿಕೊಳ್ಳುವುದು ಈಗ ಮುಖ್ಯವಾಗಿದೆ.

ವಾಸ್ತವಪರಿಸ್ಥಿತಿ ಹೇಗಿದೆಯೆಂದರೆ, "ತೃತೀಯ ರಂಗ"ದ ಪರವಾದಿಗಳೇ, ಜನತಾದ ಆರೆಸ್ಸೆಸ್ ವಿರೋಧಿ ಅಂಶಗಳಿಗೆ ಸಹಕಾರ ನೀಡುವಂಥ ರಾಜಕೀಯ ನೀತಿಯನ್ನು ಅನುಸರಿಸುವ ಸ್ಥಿತಿ ಬಂದಿದೆ. ಆದರೆ ಅವರು ಜನತಾದಲ್ಲಿ ಜನಸಂಘ ಬಲವಾಗಿದೆ, ಜನಸಂಘವನ್ನು ಆರೆಸ್ಸೆಸ್ ನಿಯಂತ್ರಿಸುತ್ತಿದೆ ಎಂಬ ತಮ್ಮ "ತಾತ್ವಿಕ" ನಿಲುವಿಗೇ ಬಲವಾಗಿ ಅಂಟಿಕೊಳ್ಳುತ್ತಿದ್ದಾರೆ.

ಮುಖ್ಯ ಶತ್ರುವಿನ ಎಂದರೆ ಆರೆಸ್ಸೆಸ್ ನಿಯಂತ್ರಣವಿರುವ ಜನತಾ ವಿರುದ್ಧ ಹೋರಾಡಿ ಎಂಬುದೇ ಅವರ ತತ್ವ. ಜನತಾದೊಳಗಿನ ಆರೆಸ್ಸೆಸ್ ವಿರೋಧಿ ಗುಂಪಿನೊಡನೆ ಸಹಕರಿಸಿ ಎಂಬುದು ಅವರ ಆಚರಣೆ. ಈ ಸಂದರ್ಭದಲ್ಲಿ ಅವರ "ತೃತೀಯರಂಗ"ದ ಘೋಷಣೆಗೆ ಏನಾದರೂ ಅರ್ಥವಿದೆಯೆ ? ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಜನತಾದೊಡನಿರುವ ಸಂಬಂಧಗಳನ್ನು ಕಳಚಿಕೊಳ್ಳಬೇಕು ಎನ್ನುವ ಮತ್ತು ಹಾಗೆ ಮಾಡದಿರುವುದಕ್ಕೆ ಮಾರ್ಕ್ಸ್‌ವಾದಿ ಪಕ್ಷವನ್ನು ಹೀಗಳೆಯುವ ಅವರ ವರ್ತನೆಯಲ್ಲಿ ಏನಾದರೂ ವಿವೇಚನೆ ಇದೆಯೆ ? ಅವರು ಈ ನಿಲುವನ್ನು ಬದಲಾಯಿಸಿಕೊಳ್ಳುವಂತೆ ಶೀಘ್ರದಲ್ಲೇ ವಾಸ್ತವ ಸಂಗತಿಗಳು ಅವರನ್ನು ಒತ್ತಾಯಿಸುತ್ತವೆಂಬುದು ಖಂಡಿತ.

○

ಹರ್ಬರ್ಟ್ ಇಂಡಿಯಾ ಯೂನಿಯನ್ ವಾರ್ಷಿಕೋತ್ಸವ

ದಿನಾಂಕ 9-5-79 ರಂದು "ಹರ್ಬರ್ಟ್ ಇಂಡಿಯಾ ಎಂಪ್ಲಾಯೀಸ್ ಯೂನಿಯನ್"ನ ವಾರ್ಷಿಕೋತ್ಸವವನ್ನು ಹೊಟೇಲ್ ಬೃಂದಾವನ್‌ನಲ್ಲಿ ಆಚರಿಸಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಕಾಂ. ಸೂರ್ಯನಾರಾಯಣರಾವ್ ವಹಿಸಿದ್ದರು. ಕಾಂ. ಟಿ. ಎಸ್. ಅನಂತರಾಂ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಕಾಂ. ಸಯ್ಯದ್ ಸನಾಉಲ್ಲಾರವರು ಸ್ವಾಗತ ಮಾಡಿದರು. ಮುಖ್ಯ ಅತಿಥಿಯವರು ಮಾತನಾಡುತ್ತಾ ಕಾರ್ಮಿಕರು ಕೇವಲ ತಮ್ಮ ಆರ್ಥಿಕ ಬೇಡಿಕೆಗಳಿಗೆ ಮಾತ್ರ ಹೋರಾಡದೆ ರಾಜಕೀಯ ಬೆಳವಣಿಗೆಯನ್ನು ತಿಳಿದು ದಿನನಿತ್ಯದ "ಬಸ್ ದರ ಏರಿಕೆ" "ಬೆಲೆ ಏರಿಕೆ" ನಿರುದ್ಯೋಗ, ಬಡತನ ಮುಂತಾದುವುಗಳಿಗೂ ಹೋರಾಟ ಮಾಡಿ ಶೋಷಣಾ ರಹಿತ ಸಮಾಜವನ್ನು ಸೃಷ್ಟಿಸಲು ಕಾರ್ಮಿಕರು ಹೋರಾಟ ನಡೆಸಬೇಕೆಂದು ಕರೆಯಿತ್ತರು.

ಕಾಂ. ಕುಂಜಪ್ಪನ್‌ರವರು ವರದಿ ಸಲ್ಲಿಸಿದರು.

ವಿವಿಧ ಕಾರ್ಮಿಕ ಸಂಘಗಳಾದ "ಸೂರಿ ಅಂಡ್ ನಾಯರ್", "ಶಿವಮನಿ ಸ್ಟೀಲ್ ಟ್ಯೂಬ್ಸ್", "ಜಿ. ಆರ್. ಸ್ಟೀಲ್ ಎಂಪ್ಲಾಯೀಸ್ ಯೂನಿಯನ್" ಮುಖಂಡರುಗಳು ಸಭೆಯಲ್ಲಿ ಆಹ್ವಾನಿತರಾಗಿ ಬಂದಿದ್ದರು.

ಮುಂದಿನ ವರ್ಷಕ್ಕೆ ಹೊಸ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯ್ತು. ಕೊನೆಯಲ್ಲಿ ಕಾಂ. ಕಾಶಿವಿಶ್ವನಾಥ್ ವಂದಿಸಿದರು.

○

ಪಾಲಿಟ್‌ಬ್ಯೂರೋ ಸ್ವಾಗತ

[5ನೇ ಪುಟದಿಂದ]

ವಿನೋಬಾ ಅವರ ಉಪವಾಸ ಎತ್ತಿದ ಗೋಹತ್ಯಾ ನಿಷೇಧ ಪ್ರಶ್ನೆ ಇವೆರಡೂ ಇನ್ನಷ್ಟು ಒತ್ತಾಯಿಸುತ್ತವೆ. ಜನತಾ ಪಕ್ಷದೊಳಗಿರುವ ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಅಂಶಗಳು ದೃಢ ನಿಲುವು ತಳೆದು, ಇತರ ಪಕ್ಷಗಳಲ್ಲಿರುವ ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳೊಡನೆ ಸೇರಿ ಸರ್ವಾಧಿಕಾರ ಮತ್ತು ಕೋಮು ಕಲಹಗಳ ವಿರುದ್ಧ ಹೋರಾಡುತ್ತವೆಂದು ಪಾಲಿಟ್‌ಬ್ಯೂರೋ ಆಶಿಸುತ್ತದೆ.

ಇಂದಿರಾಗಾಂಧಿಯವರ ನೇತೃತ್ವದ ಸರ್ವಾಧಿಕಾರಿ ಶಕ್ತಿಗಳ ವಿರುದ್ಧದ ಹೋರಾಟದ ಸಮಯದಲ್ಲಿ ಜನತಾ ಪಕ್ಷ ಅಸ್ತಿತ್ವಕ್ಕೆ ಬಂದಿತು. ಹಿಂದೂ ಪುನರ್ಜೀವನವಾದ ಮತ್ತು ಕೋಮು ಕಲಹಗಳ ಶಕ್ತಿಗಳ ವಿರುದ್ಧ ಸ್ಪಷ್ಟ ಮತ್ತು ದೃಢ ನಿಲುವನ್ನು ಜನತಾಪಕ್ಷ ತಳೆದ ಹೊರತು ಅವರ ಸರ್ಕಾರ ಈ ಕರ್ತವ್ಯಗಳನ್ನು ನಿರ್ವಹಿಸಲಾರದೆಂಬುದು ಎರಡು ವರ್ಷಗಳ ಜನತಾ ಸರ್ಕಾರದ ಅನುಭವದಿಂದ ತಿಳಿದು ಬಂದಿದೆ. ಜನತಾಪಕ್ಷದ ಶಿಸ್ತಿಗೆ ಒಳಗಾಗಿ ಅದರೊಳಗೆ ಐಕ್ಯವಾಗಲು ನಿರಾಕರಿಸುತ್ತಿರುವ ಆರೆಸ್ಸೆಸ್, ಅದೇ ಸಮಯದಲ್ಲೇ ಆಡಳಿತಪಕ್ಷದ ಒಂದು ಅಂಗವೂ ಆಗಿ, ಆಡಳಿತ ಯಂತ್ರದೊಳಗೆ ಸೇರಿ, ಅದನ್ನು ಕೋಮುಗಲಭೆಯ ವಾಹಕವನ್ನಾಗಿ ಪರಿವರ್ತಿಸುತ್ತಿದೆ. ಆರೆಸ್ಸೆಸ್ ನಾಯಕರ ಈ "ದ್ವಂದ್ವಪಾತ್ರ" ಕೊನೆಗೊಳ್ಳಬೇಕು ಎಂದು ಜನತಾ ನಾಯಕತ್ವದ ಅನೇಕರು ಒತ್ತಾಯಿಸಿರುವುದು ಸರಿಯೇ ಆಗಿದೆ.

ಜನತಾಪಕ್ಷದೊಳಗಿನ ಈ ಪ್ರವೃತ್ತಿಯನ್ನು ಗಮನಿಸಬೇಕೆಂದು, ಜನತಾ ಪಕ್ಷದಾಚೆಗಿನ ಎಲ್ಲ ಜಾತ್ಯಾತೀತ-ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಪಾಲಿಟ್‌ಬ್ಯೂರೋ ಮನವಿ ಮಾಡುತ್ತದೆ. ಜನತಾಪಕ್ಷವನ್ನು ಆರೆಸ್ಸೆಸ್ ಕೈಗೊಂಬೆ ಎಂದು ಮೂಗುಮುರಿಯುವವರೆಲ್ಲರೂ ಪಕ್ಷದೊಳಗೆ ಆರೆಸ್ಸೆಸ್ ಪರವಾದಿಗಳು ಮತ್ತು ವಿರೋಧಿಗಳ ನಡುವೆ ಇರುವ ಈ ವಿಚಾರವನ್ನು ಅದರ ತಪ್ಪುಗಳ ಸಮೇತ ಗಮನಿಸಬೇಕು.

ಸರ್ವಾಧಿಕಾರ ವಿರೋಧಿ ಮತ್ತು ಜಾತ್ಯಾತೀತ ಶಕ್ತಿಗಳ ಐಕ್ಯರಂಗದ ಉದಯಕ್ಕೆ ಸಹಾಯ ಮಾಡುವಂಥ, ಸ್ವರಣ್‌ಕಾಂಗ್ರೆಸ್, ಭಾರತ ಕಮ್ಯುನಿಸ್ಟ್‌ಪಕ್ಷ ಮತ್ತು ಇಂದಿರಾ ಕಾಂಗ್ರೆಸ್ಸಿನಲ್ಲಿ ಕೂಡ ನಡೆದಿರುವ ಇತ್ತೀಚಿನ ವಿದ್ಯಾಮಾನಗಳನ್ನು ಪಾಲಿಟ್ ಬ್ಯೂರೋ ಸ್ವಾಗತಿಸುತ್ತದೆ. ಸಂಜಯಗಾಂಧಿಯನ್ನು ಮತ್ತೆ ಸಂವಿಧಾನಾತೀತ ಶಕ್ತಿಯನ್ನಾಗಿ ಮಾಡುವ ಪ್ರಯತ್ನಕ್ಕೆ ಇಂದಿರಾಕಾಂಗ್ರೆಸ್ಸಿನೊಳಗೆ ಇರುವ ಬಹಿರಂಗ ವಿರೋಧ. ಕಾಂಗ್ರೆಸ್ (ಐ) ಜೊತೆ "ಐಕ್ಯ"ವಾಗಬೇಕೆಂಬ ಮೊದಲ ಪ್ರಯತ್ನಗಳನ್ನು ಸ್ವರಣ್‌ಕಾಂಗ್ರೆಸ್ ಕೈಬಿಟ್ಟದ್ದು, ಜನತಾಪಕ್ಷದೊಳಗಿನ ಇತ್ತೀಚಿನ ಧೋರಣೆಗಳನ್ನು ಕಮ್ಯುನಿಸ್ಟ್‌ಪಕ್ಷ ಗುರುತಿಸಿದ್ದು—ಇವೆಲ್ಲವೂ ಸರ್ವಾಧಿಕಾರ ಮತ್ತು ಮತೀಯ ಕಲಹವನ್ನು ವಿರೋಧಿಸಲು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳೆಲ್ಲವೂ ಒಂದುಗೂಡಬೇಕೆಂಬ ಆಸೆಯನ್ನು ಈಡೇರಿಸುವುದರಲ್ಲಿ ಸಹಾಯಮಾಡುತ್ತವೆ.

ಇಂದಿರಾಕಾಂಗ್ರೆಸ್ ಮತ್ತು ಜನತಾದ ವಿರುದ್ಧ ಏಕಕಾಲದಲ್ಲಿ ಹೋರಾಡುವ "ತೃತೀಯ ರಂಗ"ದ ಸೃಷ್ಟಿಯು ಸದ್ಯದ ಪರಿಸ್ಥಿತಿಯಲ್ಲಿ ಬೇಕಾಗಿಲ್ಲ ಎಂಬ ಅಂಶವನ್ನು ಸ್ವರಣ್ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್‌ಪಕ್ಷ ಅರ್ಥಮಾಡಿಕೊಳ್ಳಬೇಕೆಂದು ಪಾಲಿಟ್‌ಬ್ಯೂರೋ ಮನವಿ ಮಾಡುತ್ತದೆ. ಅಲ್ಲದೆ ಇಂದಿರಾಕಾಂಗ್ರೆಸ್ ಮತ್ತು ಜನತಾದೊಳಗಿನ ಕಲಹಗಳನ್ನೂ ಅವರೇ ಅರ್ಥ ಮಾಡಿಕೊಳ್ಳಬೇಕಾಗಿದೆ. ಜಾತ್ಯಾತೀತತೆ ಮತ್ತು ಪ್ರಜಾಪ್ರಭುತ್ವದ ಪರವಾಗಿ ಹೋರಾಡುವವರ ಬಗ್ಗೆ ಪೂರ್ವಾಗ್ರಹಗಳನ್ನು ಮುಂದುವರೆಸುವುದರಿಂದ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯತೆ ಬೆಳೆಯಲು ಸಹಾಯಮಾಡಿದಂತಾಗುವುದಿಲ್ಲ. ಬದಲು ಅದು ಕುಂಠಿತವಾಗುತ್ತದೆ.

○

ಮೈಸೂರು ಗಣಿ ಕಾರ್ಮಿಕರ ಸಭೆ

ಕೋಲಾರ ಜಿಲ್ಲೆಯ ಮೈಸೂರು ಗಣಿಯ ಎಡ್ಗರ್‌ಶಾಫ್ಟ್‌ನ ಕಾರ್ಮಿಕರು 15.5.79 ರಂದು ಗೇಟ್‌ಮೀಟಿಂಗ್ ನಡೆಸಿದರು. ಕಾಂ. ಎಸ್. ಸವರಿದಾಸ್, ಎ. ಕಣ್ಣನ್, ಎಸ್. ದೇವರಾಜ್ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. 1977, 78 ರ ಶೇಕಡಾ 20ರ ಬೋನಸ್ ನೀಡಬೇಕೆಂದು ಸಭೆ ಒತ್ತಾಯಿಸಿತು. ಈ ಬೇಡಿಕೆಗಳ ಬಗ್ಗೆ ಆಡಳಿತ ವ್ಯವಸ್ಥೆಗೆ ಮನವಿ ಅರ್ಪಿಸಲಾಗಿದೆ.

○

ತಹಸೀಲ್ದಾರ್ ಕಚೇರಿಗೆ ರೈತರ ಮೆರವಣಿಗೆ ನಡೆಸಲು ನಿರ್ಧಾರ

ಬೆಂಗಳೂರು ಜಿಲ್ಲಾ ರೈತಸಂಘದ ಆಶ್ರಯದಲ್ಲಿ ಮಡಿವಾಳದಲ್ಲಿ ರೈತರ ಬಹಿರಂಗಸಭೆಯು ತಾ. 17-5-79 ರಂದು ನಡೆಯಿತು. ಸುಮಾರು 500 ಜನ ಕೃಷಿಕಾರ್ಮಿಕರು ಭಾಗವಹಿಸಿದರು. ಮಂಗಳೂರಿನಲ್ಲಿ ಈ ತಿಂಗಳು ನಡೆದ ಕರ್ನಾಟಕ ರಾಜ್ಯದ ಆರನೆಯ ರೈತಸಮ್ಮೇಳನದ ಕಾರ್ಯಕಲಾಪಗಳನ್ನು ರಾಜ್ಯಕಿಸಾನ್‌ಸಭೆಯ ಅಧ್ಯಕ್ಷರಾದ ಕಾಂ. ಎಚ್. ಮುಗವಾಳಪ್ಪ ಅವರು ವಿವರಿಸಿ ಸರ್ಕಾರವು ಭೂಮಾಲೀಕರ ಪರವಾಗಿರುವುದರಿಂದ ಚಳುವಳಿ ನಡೆಸಬೇಕೆಂದು ಕರೆಯಿತ್ತರು.

ಕರ್ನಾಟಕ ರಾಜ್ಯ ಕಿಸಾನ್‌ಸಭೆಯ ಖಜಾಂಚಿ ಕಾಂ. ಪಿ. ಜಗನ್ನಾಥ್ ಅವರು ಮಾತನಾಡಿ ಈ ತಿಂಗಳು 28 ರಂದು ತಹಸೀಲ್ದಾರ್ ಕಚೇರಿಯ ಮುಂದೆ ರೈತರ ಜಾಥಾ ನಡೆಸಲು ಎಲ್ಲರೂ ಬರಬೇಕೆಂದು ಕರೆಯಿತ್ತಾಗ ಸಭೆ ಒಕ್ಕೊರಲಿನಿಂದ ಅಂಗೀಕರಿಸಿತು. ಮಡಿವಾಳದ ಗ್ರಾಮಪಂಚಾಯಿತಿ ಸದಸ್ಯರಾದ ಬಾಬುರೆಡ್ಡಿಯವರು ಮೆರವಣಿಗೆಗೆ ಬೆಂಬಲ ವ್ಯಕ್ತಪಡಿಸಿದರು. ಬೆಂಗಳೂರು ಜಿಲ್ಲಾ ರೈತಸಂಘದ ಸದಸ್ಯರಾದ ಕಾಂ. ಶಾಮಣ್ಣರೆಡ್ಡಿಯವರು ವಂದನೆ ಸಲ್ಲಿಸಿದರು.

ಬೀಡಿ ಕಾರ್ಮಿಕರಿಗೆ ಅನ್ಯಾಯ

ಕರ್ನಾಟಕ ರಾಜ್ಯದಲ್ಲಿ ಸುಮಾರು ಐದು ಲಕ್ಷ ಬೀಡಿ ಕಾರ್ಮಿಕರು ಇದ್ದಾರೆ. ಈ ಕಾರ್ಮಿಕರಿಗೆ ಕೂಲಿ ಹೆಚ್ಚಿಸುವ ಸೂಚನೆಗಳನ್ನು ಕಳೆದ 78 ರ ಫೆಬ್ರವರಿಯಲ್ಲಿ ಸರ್ಕಾರ ಪ್ರಕಟಿಸಿತ್ತು. ಪುನರ್ವಿಮರ್ಶಿತ ದರದ ಪ್ರಕಾರ 1000 ಬೀಡಿಗೆ 55 ಪೈಸೆ ಆಗುತ್ತದೆ. 78ರ ಮೇ ಒಂದರಿಂದ ಜಾರಿಗೆ ಬರಬೇಕಾದ ಈ ದರ ಇನ್ನೂ ಬಂದಿಲ್ಲ. ಇದಕ್ಕೆ ಕಾರಣ, ಸರ್ಕಾರದ ಮೇಲೆ ಮಾಲೀಕರಿಗಿರುವ ಪ್ರಭಾವ, ಸಲಹಾಮಂಡಲಿಯಲ್ಲಿದ್ದ ಕಾರ್ಮಿಕರ ಪ್ರತಿನಿಧಿಗಳ ಅಸಡ್ಡೆ ಮತ್ತು ಅವರು ಮಾಲೀಕರ ಕೈಗೊಂಬೆಯಾದದ್ದು ಮುಂತಾದವು. ಇದರಿಂದ 14 ತಿಂಗಳಿಂದ ಸುಮಾರು ಹತ್ತು ಕೋಟಿ ರೂಗಳು ಐದು ಲಕ್ಷ ಕಾರ್ಮಿಕರ ಕೈಸೇರದಂತಾಗಿದೆ. ಈ ವಿಚಾರವಾಗಿ ಕರ್ನಾಟಕದ ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ ಹೋರಾಟ ನಡೆಸುತ್ತಿದೆ. ಈ ಮೇ 21ರಂದು ಮತ್ತೆ ಮುಷ್ಕರ ನಡೆಸಲು ಬೀಡಿ ಕಾರ್ಮಿಕರಿಗೆ ಕರೆ ನೀಡಲಾಗಿತ್ತು.

●

ನಗರದ ಜೀವನಾಡಿ ಆಟೋರಿಕ್ಷಾ

[3ನೇ ಪುಟದಿಂದ]

ವಾಗಿ ನಡೆಯುತ್ತಿರುವುದರಿಂದಲೇ ಹೆಚ್ಚು ಕ್ರೂರ ಶೋಷಣೆಗೆ ಒಳಪಟ್ಟಿದೆ. ಒಬ್ಬ ರಿಕ್ಷಾದವನು ಸಾಲಪಡೆಯಬೇಕಾದರೆ (ಐದುಸಾವಿರ ಸಾಲಪಡೆಯಬೇಕಾದರೆ) ಇತರೆ ಖರ್ಚುಗಳ ಜೊತೆಗೆ 500 ರೂ. ದಂಡವಾಗುತ್ತದೆ. ಈ ಮಾರ್ವಾಡಿಗಳ ಹತ್ತಿರ, ಅದೇ ರೀತಿ ಆಟೋರಿಕ್ಷಾ 5 ಜನರ ಕೈಗಳಿಗೆ ಬದಲಾದರೆ ಒಬ್ಬೊಬ್ಬನ ಹತ್ತಿರ 500 ರೂ. ನಂತೆ 5 ಜನರ ಹತ್ತಿರವೂ (ಮಾರ್ವಾಡಿ) ಕೊಳ್ಳೆಹೊಡೆಯುತ್ತಾನೆ. ಇಷ್ಟು ದೊಡ್ಡ ಅನ್ಯಾಯ ನಡೆಯುತ್ತಿರುವ ಸಂದರ್ಭದಲ್ಲಿಯೇ, ಅದನ್ನು ನಂಬಿ ಬದುಕುವ ಆಟೋಮಾಲೀಕರಾದ ಆಟೋಡ್ರೈವರ್‌ಗಳು ತಮ್ಮ ಹಿತವನ್ನು ಕಾಪಾಡಿಕೊಳ್ಳುವುದಕ್ಕೆ ಒಗ್ಗಟ್ಟಾಗುವ ಪ್ರಜ್ಞೆಯಿಲ್ಲದೆ ಅವರ ಸ್ಥಿತಿ ತುಂಬಾ ಚಿಂತಾಜನಕವಾಗಿದೆ.

ಆಟೋ ಚಾಲಕರ ಜೀವನ :

ಆಟೋರಿಕ್ಷಾ ಚಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಗೋರಿಪಾಳ್ಯ, ಟಿಪ್ಪುನಗರ್, ಕಲಾಸಿಪಾಳ್ಯಂ, ಟ್ಯಾನರೋಡು, ಶಾಂತಿನಗರ್, ಲಿಂಗರಾಜಪುರ, ಶ್ರೀರಾಮಪುರ, ಗುಡ್ಡದಹಳ್ಳಿ, ಭಾರತಿನಗರ ಮುಂತಾದ ಎಡೆಗಳಲ್ಲಿ ವಾಸಿಸುತ್ತಾರೆ. ಅವರು ವಾಸಿಸುವ ಸ್ಥಳಗಳು ಖಾಯಿಲೆಯ ನಿಧಾನಗಳಾಗಿವೆ. ಇವರು ವಾಸಿಸುವ ಬಡಾವಣೆಗಳು ಕುಡಿಯುವ ನೀರಿನ ವ್ಯವಸ್ಥೆಯಿಲ್ಲದೆ ಪರದಾಟವಾಗಿದೆ. ರಸ್ತೆಗಳಿಲ್ಲದ ಬಡಾವಣೆ. ಬೆಳಕಿನ ವ್ಯವಸ್ಥೆಯಿಲ್ಲದ ಗುಡಿಸಲುಗಳು, ಇವರು ವಾಸಿಸುವ ಸ್ಥಳಗಳು ಸೊಳ್ಳೆಗಳ ತವರೂರಾಗಿದೆ.

ಈ ಬಡಾವಣೆಯಲ್ಲಿ ವಾಸಿಸುವ ಹೆಚ್ಚಿನ ಆಟೋಡ್ರೈವರ್‌ಗಳ ಮಕ್ಕಳು 6 ವಯಸ್ಸಿಗೆ ಬರುವವರೆಗೂ ಮನೆಯಲ್ಲಿಯೇ ಇದ್ದು ನಂತರ ಅವರ ದುಡಿಮೆ ಪ್ರಾರಂಭವಾಗುತ್ತದೆ. ಈ ಮಕ್ಕಳು ಶಾಲೆಗೆ ಹೋಗುವ ಬದಲು ವರ್ಕ್‌ಶಾಪಿಗೆ ದುಡಿಯಲು ತೆರಳುತ್ತಾರೆ. ಹೀಗಾಗಿ ವಿಧ್ಯೆಯಿಂದ ವಂಚಿತರಾಗಿ ಸ್ವಾಭಾವಿಕವಾಗಿ ಅವರು ದುಷ್ಟರಾಗಿ ರೂಪುಗೊಳ್ಳುತ್ತಾರೆ.

ಸೋಂಕು ರೋಗಗಳ ಉತ್ಪತ್ತಿಸ್ಥಳಗಳಾದ ಈ ಪ್ರದೇಶಗಳಲ್ಲಿ ಮಕ್ಕಳ ಸಾವು ತೀರ ಅನಿವಾರ್ಯವಾಗಿದೆ. ಹಾಗೂ ವೈದ್ಯಕೀಯ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಇಲ್ಲಿನ ಮಹಿಳೆಯರ ದುಡಿಮೆ ಗಂಡಸರಿಗಿಂತ ಹೆಚ್ಚಾಗಿದೆ. ಅವರು ಮನೆಗೆಲಸದ ಜೊತೆಗೆ ಅಗರಬತ್ತಿ, ಮತ್ತು ಬೀಡಿಕಟ್ಟುವುದರಲ್ಲಿ ನಿರತರಾಗಿದ್ದಾರೆ. ಇಷ್ಟೆಲ್ಲಾ ದುಡಿದರೂ ಅವರ ಜೀವನಮಟ್ಟ ಸುಧಾರಿಸಿಲ್ಲ. ಅವರು ತಮ್ಮ ಪ್ರದೇಶಗಳಲ್ಲಿ ಮಾರ್ವಾಡಿಗಳ ಹಾಗೂ ಕಂತು ಬಡ್ಡಿ ವ್ಯಾಪಾರಿಗಳ ಕೈಗೆ ಸಿಕ್ಕಿ ತತ್ತರಿಸುತ್ತಿದ್ದಾರೆ. ಅವರ ಜೀವನಮಟ್ಟ ಅತಿ ಭಯಾನಕವಿದ್ದು ಎಂತಹ ಕಲ್ಲು ಹೃದಯವನ್ನೂ ಕರಗಿಸುವಂತದ್ದಾಗಿದೆ.

ಅತಿ ಶೋಷಣೆಗೆ ಒಳಗಾದ ಆಟೋಡ್ರೈವರ್‌ಗಳನ್ನು ಸಂಘಟಿಸುವಲ್ಲಿ ಸಿ. ಐ. ಟಿ. ಯು. ಮುಂದಾಗಿದೆ. 1974 ರಲ್ಲಿ 90 ಪೈಸೆ ಮಾಡಬೇಕೆಂದು ಹೋರಾಟ ನಡೆಸಿ ತಮ್ಮ ಬೇಡಿಕೆಯನ್ನು ಪಡೆಯಿತು. ಅಂತಹ ಸಂದರ್ಭದಲ್ಲಿ 45 ಪೈಸೆಗೆ ಇಳಿಸಲು ಕೆಲವರು ಕಾರಣರಾದರು ಅಂತಹ ಜನರೇ ಮೊನ್ನೆ 1-25 ಪೈಸೆಬೇಕೆಂದು ವಿಧಾನಸೌಧದ ಮುಂದೆ ಸತ್ಯಾಗ್ರಹ ಮಾಡಿದರು. ಇವರ ಬೇಡಿಕೆ ಡ್ರೈವರ್‌ಗಳನ್ನು ಮತ್ತು ಜನತೆಯನ್ನು ಆಕರ್ಷಿಸುವ ರೀತಿಯಲ್ಲಿರದೆ, ಜನರ ವಿರೋಧವನ್ನು ಕಟ್ಟಿಕೊಳ್ಳುವಂತಿದೆ. ಇದಕ್ಕೆಲ್ಲ ಶ್ರೀ ದೇವರಾಜ ಅರಸರ ಅಳಿಯ ಶ್ರೀ ಎಂ. ಡಿ. ನಟರಾಜ್ ರವರೇ ಕಾರಣರೆಂದು ಬಹಳಷ್ಟು ಆಟೋಡ್ರೈವರ್‌ಗಳು ಮನಗಂಡಿದ್ದಾರೆ.

ಸಿ. ಐ. ಟಿ. ಯು. ವಿನ ಅಧ್ಯಕ್ಷರಾದ ಕಾಂ. ಎಸ್. ಸೂರ್ಯನಾರಾಯಣರಾವ್ ಅವರ ನಾಯಕತ್ವದಲ್ಲಿರುವ ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್ ತನ್ನ ಅನುಯಾಯಿಗಳ ಸಭೆ ಸೇರಿಸಿ ಸಾಮಾನ್ಯ ಜನತೆಯ ಹಿತಕ್ಕಾಗಿ ಗಾಡಿಗಳನ್ನು ಓಡಿಸುವ ತೀರ್ಮಾನವನ್ನು ಕೈಗೊಂಡಿದೆ. ಇದರಿಂದ ವಿರೋಧಿ ಯೂನಿಯನ್ನಿನವರ ಬೇಡಿಕೆ ಈಡೇರದೆ, ಕೈ ಕೈ ಹಿಸುಕುವಂತಾಗಿದೆ.

ಆಟೋ ರಿಕ್ಷಾ ಡ್ರೈವರ್ಸ್ ಯೂನಿಯನ್ನಿನ ಬೇಡಿಕೆ :

1. ಆಟೋರಿಕ್ಷಾಗಳನ್ನು ಆಟೋಡ್ರೈವರ್‌ಗಳಿಗೇ ನೀಡಬೇಕು.

2. ಹೇಗೆ ಪರಿಶಿಷ್ಟ ಮತ್ತು ಹಿಂದುಳಿದ ಜನಾಂಗಕ್ಕೆ ಕೊನೆಯಪಕ್ಷ ಶೇ. 4ರ ಬಡ್ಡಿಯಲ್ಲಿ ಬ್ಯಾಂಕುಗಳಲ್ಲಿ ಸಾಲ ಪಡೆಯುವ ಸೌಕರ್ಯವಿದೆಯೋ ಅದೇ ರೀತಿ ಕೇಂದ್ರ ಮತ್ತು ರಾಜ್ಯಸರಕಾರ ಜಂಟಿಯಾಗಿ ಸಾಲ ನೀಡುವ ಏರ್ಪಾಡು ಮಾಡಬೇಕು.

3. ವಾಸಿಸಲು ಒಳ್ಳೆಯ ರೀತಿಯ ಮನೆಗಳನ್ನು ಕಟ್ಟಿಸಿಕೊಡಬೇಕು. "ಹುಡ್ಕೊ" ರೀತಿಯ ಗೃಹಗಳಲ್ಲಿ ಆಟೋಚಾಲಕರಿಗೆ, ಕಡಿಮೆ ಬಾಡಿಗೆಯಲ್ಲಿ ಮನೆಗಳನ್ನು ಒದಗಿಸಬೇಕು.

4. ವರ್ಷಕ್ಕೆ 24 ರೂ ಕಾರ್ಪೊರೇಷನ್‌ಗೆ ಕೊಟ್ಟರೂ ಅದರಿಂದ ಏನೂ ಪ್ರಯೋಜನವಿಲ್ಲ. ಆದುದರಿಂದ ಕಾರ್ಪೊರೇಷನ್ ಶಲ್ಕವನ್ನು ರದ್ದುಪಡಿಸಬೇಕು.

5. ಕೂಡಲೇ ಫೈನಾನ್ಸಿಯರ್‌ಗಳಿಂದ ಆಟೋಗಳನ್ನು ಬಿಡಿಸಿ ಸರಕಾರಿ ಬ್ಯಾಂಕಿನಲ್ಲಿ ರಿಕಾರ್ಡ್ ಆಧಾರದ ಮೇಲೆ ಸಾಲ ನೀಡಬೇಕು.

6. ದಿನನಿತ್ಯ ಸಣ್ಣ ಸಣ್ಣ ಕಾರಣಗಳಿಗಾಗಿ ಟ್ರಾಫಿಕ್ ಪೋಲೀಸರು ಹಾಕುವ ಕೇಸುಗಳನ್ನು ನಿಲ್ಲಿಸಬೇಕು.

7. ಕಡಿಮೆ ಬೆಲೆಯಲ್ಲಿ ಟೈರ್, ಆಟೋಬಿಡಿಭಾಗಗಳು, "ಜನತಾ ಬಜಾರ್" ಯೂನಿಟ್‌ಗಳನ್ನು ಪ್ರಾರಂಭಿಸಿ ಸಪ್ಲೈ ಮಾಡಬೇಕು.

ಇಂತಹ ಬೇಡಿಕೆಗಳನ್ನು ಮುಂದಿಟ್ಟು ಬೆಂಗಳೂರಿನ ಆಟೋಚಾಲಕರು ಕೆಂಬಾವುಟದಡಿಯಲ್ಲಿ ಸಂಘಟಿತರಾಗಿ ಹೋರಾಟ ಮುಂದುವರೆಸುತ್ತಿದ್ದಾರೆ.

○

ನಾಗರಿಕ ಸಮಿತಿ ಸಭೆ

ದ. ಕ. ಜಿಲ್ಲೆಯ ಮಂಗಳೂರು ತಾಲ್ಲೂಕು ತೊಕ್ಕೋಟಿನ ನಾಗರಿಕ ಸಮಿತಿಯ ಸಭೆಯು ತಾ. 17-5-79 ರಂದು ಜರುಗಿತು. ಕಳೆದ ಸಭೆಯು ಅಂಗೀಕರಿಸಿದ ನಿರ್ಣಯಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ಕಳುಹಿಸಿದ ಬಗ್ಗೆ ಮತ್ತು ಅವುಗಳು ಕಾರ್ಯಗತವಾಗಿರುವುದರ ಬಗ್ಗೆ ಪರಿಶೀಲನೆ ನಡೆಸಿದ ಬಳಿಕ ಸಭೆಯು ಹೊಸ ನಿರ್ಣಯಗಳನ್ನು ಅಂಗೀಕರಿಸಿತು. ಪೆರ್ಮನ್ನೂರು ಪಂಚಾಯತ್ ಕ್ಷೇತ್ರದೊಳಗಿನ ಸಾರ್ವಜನಿಕ ಕಾಮಗಾರಿ ಕೆಲಸಗಳ ಬಗ್ಗೆ ಪಂಚಾಯಿತಿಗೆ ಮನವಿಕೊಡುವುದು, ನ್ಯಾಯಬೆಲೆಯಲ್ಲಿ ಅಕ್ಕಿ, ಸೀಮೆ ಎಣ್ಣೆಯ ವ್ಯವಸ್ಥೆ, ಉಳ್ಳಾಲ ಪೋಲೀಸ್ ಸ್ಟೇಷನ್ನಿನ ಸರಹದ್ದಿನೊಳಗೆ ನಡೆಯುವ ದುರ್ವರ್ತನೆ ಇವುಗಳ ಬಗ್ಗೆ ನಿರ್ಣಯ ಸ್ವೀಕರಿಸಿ ಸಂಬಂಧಿಸಿದವರಿಗೆ ಮನವಿ ಮಾಡುವುದೆಂದು ತೀರ್ಮಾನಿಸಲಾಯಿತು. ●

ನಿರಪರಾಧಿಗಳ ಮೇಲೆ ಧಾಳಿ

ದ. ಕ. ಜಿಲ್ಲೆ ಮಂಗಳೂರು ತಾಲ್ಲೂಕಿನ ಜಪ್ಪಿನಮೊಗ್ರು ಗ್ರಾಮದ ಅಡುಂಬು ಕುದ್ರು ಎಂಬಲ್ಲಿ ಅಬಕಾರಿ ಧಾಳಿಯ ನೆಪದಲ್ಲಿ ಗೂಂಡಾಗಳು ಪೋಲೀಸರ ಜತೆಸೇರಿ ನಿರಪರಾಧಿಗಳ ಮೇಲೆ ಇತ್ತೀಚಿಗೆ ಧಾಳಿ ನಡೆಸಿದ್ದು, ಸಹಸ್ರಾರು ರೂಪಾಯಿ ಬೆಲೆಬಾಳುವ ಸಾಮಗ್ರಿಗಳನ್ನು ದೋಚಲಾಗಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಪ್ಪಿನಮೊಗ್ರು ಘಟಕವು ಗ್ರಾಮ ಪಂಚಾಯತ್ ಚೆಯರ್‌ಮೆನ್ ಕಾಂ. ಜಿ. ಸದಾಶಿವಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈ ಧಾಳಿಯನ್ನು ಖಂಡಿಸಿತು. ಪಕ್ಷದ ಮುಂದಾಳು ಕಾಂ. ಪಿ. ರಾಮಚಂದ್ರರಾಯರೂ ಸೇರಿ, ದಾಳಿಗೊಳಗಾದವರನ್ನು ಭೇಟಿ ಮಾಡಲಾಯಿತು. ಈ ಅಮಾನುಷ ಧಾಳಿ ಬಗ್ಗೆ ಜಿಲ್ಲಾ ಪೋಲೀಸ್ ಅಧಿಕಾರಿಗಳಿಗೆ ದೂರೀಯಲಾಗಿದೆ. ಇಂತಹ ಅಮಾನುಷ ಕೃತ್ಯಗಳು ನಡೆಯದಂತೆ ಕ್ರಮ ವಹಿಸಲು ಪೋಲೀಸ್ ಅಧಿಕಾರಿಯವರನ್ನು ಪಕ್ಷದ ಜಪ್ಪಿನಮೊಗ್ರು ಘಟಕ ಒತ್ತಾಯಿಸಿದೆ.

●

ಕುಣಿಗಲ್‌ನಲ್ಲಿ ದ.ಸಂ.ಸ. ಆಶ್ರಯದಲ್ಲಿ ಮೆರವಣಿಗೆ, ಸಭೆ

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ದಲಿತ ಸಂಘರ್ಷ ಸಮಿತಿ ಆಶ್ರಯದಲ್ಲಿ ತಾ॥ 16.5.79ರಂದು ಸ್ಥಳೀಯ ಶಾಸಕ (ಕಾಂಗ್ರೆಸ್-ಐ) ಶ್ರೀ ಅಂದಾನಯ್ಯ ಹಾಗೂ ತಾಲ್ಲೂಕು ಬೋರ್ಡ್ ಅಧ್ಯಕ್ಷರು ಪೋಲೀಸರ ಸಹಾಯದಿಂದ ಹೆಬ್ಬೂರು ಹೋಬಳಿ, ಮಳಲವಾಡಿ ಗ್ರಾಮದಲ್ಲಿ ಹರಿಜನರ ಮನೆಗಳನ್ನು ನೆಲಸಮ ಮಾಡಿದ್ದನ್ನು ಪ್ರತಿಭಟಿಸಿ, ಮಳಲವಾಡಿ, ಬಸವನ ಮತ್ತೀಕೆರೆ, ಕಾಡು ಮತ್ತೀಕೆರೆ ಗ್ರಾಮಗಳಿಂದ ಬಂದ ಹರಿಜನರು ಉಚಿತ ಮನೆ, ಭೂಮಿ. ಈಗಾಗಲೇ ಸಾಗುವಳಿ ಮಾಡುತ್ತಿರುವ ಜಮೀನುಗಳಿಗೆ ಪಟ್ಟಾ ಹಂಚಿಕೆ, ಹರಿಜನರ ಮೇಲೆ ನಡೆಯುತ್ತಿರುವ ಸಾಮಾಜಿಕ ಶೋಷಣೆ ವಿರುದ್ಧ, ಹಾಗೂ ಸರಕಾರಿ ನೇಮಕಾತಿಗಳಲ್ಲಿ ತಮಗೆ ಸಿಗಬೇಕಾದ ಮೀಸಲು ಸ್ಥಾನಗಳ ಬಗ್ಗೆ ತಹಸೀಲ್ದಾರ್ ಮತ್ತು ಬಿ.ಡಿ.ಓ. ಗಳಿಗೆ ಮನವಿ ಸಲ್ಲಿಸಿದರು. ಬೇಡಿಕೆಗಳಿಗೆ ಬೆಂಬಲ ನೀಡಿ ಸಿ.ಐ.ಟಿ.ಯು. ನೇತೃತ್ವದ ಬೀಡಿ ಕೆಲಸಗಾರರ ಸಂಘದ ಕಾರ್ಮಿಕರು, ಮುಸ್ಲಿಂ ಮಹಿಳಾ ಕಾರ್ಮಿಕರನ್ನು ಒಳಗೊಂಡು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಸುಮಾರು ಮುನ್ನೂರು ಜನ ಹರಿಜನರು, ಕಾರ್ಮಿಕರು, ರೈತರು, ವಿದ್ಯಾರ್ಥಿಗಳು ಭಾಗವಹಿಸಿದ್ದ ಮೆರವಣಿಗೆ, ವಾರದ ಸಂತೆಗಾಗಿ ಬಂದಿದ್ದ ಜನಗಳ ಗಮನ ಸೆಳೆಯುವಂತಿತ್ತು. ಕೊನೆಯಲ್ಲಿ ನಡೆದ ಸಭೆಯಲ್ಲಿ ದಲಿತ ಸಂಘರ್ಷ ಸಮಿತಿ, ಸಿ.ಐ.ಟಿ.ಯು. ಮತ್ತು ರೈತ ಸಂಘದ ಮುಖಂಡರು ಒಂದು ತಿಂಗಳ ಅವಧಿಯಲ್ಲಿ ಬೇಡಿಕೆಗಳು ಈಡೇರದಿದ್ದಲ್ಲಿ ಚಳುವಳಿಯನ್ನು ಪ್ರಾರಂಭಿಸುವ ತೀರ್ಮಾನ ಕೈಗೊಂಡರು.

ರೇಷ್ಮೆ ತೋಟಕೆಲಸಗಾರರ ಮುಷ್ಕರ

ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು ಧರ್ಮಾಪುರದಲ್ಲಿ ಸುಮಾರು 5-6 ವರ್ಷಗಳಿಂದಲೂ (200) ಎರಡುನೂರು ಚಿಲ್ಲರೆ ಎಕರೆ ಪ್ರದೇಶದಲ್ಲಿ ಸರ್ಕಾರಿ ರೇಷ್ಮೆ ಇಲಾಖೆಯವರು ರೇಷ್ಮೆ ಕೈಗಾರಿಕೆಯ ಅಭಿವೃದ್ಧಿಗಾಗಿ ರೇಷ್ಮೆ ವ್ಯವಸಾಯವನ್ನು ನಡೆಸುತ್ತಾ ಬಂದಿರುತ್ತಾರೆ. ಇಲ್ಲಿ ಸುಮಾರು (300) ಮೂರುನೂರಕ್ಕೂ ಹೆಚ್ಚು ಮಂದಿ ಕೆಲಸ ಮಾಡುತ್ತಿದ್ದಾರೆ. ಇವರೆಲ್ಲರೂ ಈ ಪ್ರದೇಶದಲ್ಲಿದ್ದ ಕಾಡು ಕಡಿದು ಹಿಪ್ಪನೇರಳೆ ವ್ಯವಸಾಯಕ್ಕೆ ಯೋಗ್ಯವಾಗಿ ಮಾಡಿದ್ದಾರೆ.

ಈಗ್ಗೆ ಸುಮಾರು ಆರುತಿಂಗಳ ಹಿಂದೆ ಸರ್ಕಾರಿ ಅಧಿಕಾರಿಗಳ ದಬ್ಬಾಳಿಕೆಯನ್ನೆದುರಿಸಿ ಎರಡು ಮೂರು ದಿನಗಳ ಮುಷ್ಕರವನ್ನು ಈ ಕೆಲಸಗಾರರು ಮಾಡಿದ್ದರು. ಅಲ್ಲಿಂದೀಚೆಗೆ ಅವರು ಸಂಘಟಿತರಾಗಿ ಸಂಘವನ್ನು ರಚಿಸಿಕೊಂಡಿದ್ದಾರೆ. ಈ ಸಂಘಟನೆಯನ್ನು ಮುರಿಯುವ ಸಲುವಾಗಿ ಈವರೆವಿಗೆ ಸುಮಾರು ಹದಿನೇಳು ಕೆಲಸಗಾರರನ್ನು ಕೆಲಸದಿಂದ ತೆಗೆದು ಹಾಕಿದುದರ ಪರಿಣಾಮವಾಗಿ ಉನ್ನತಾಧಿಕಾರಿ ಡೆಪ್ಯೂಟಿ ಡೈರೆಕ್ಟರ್ ಸೌತ್ ಜೋನ್‌ರವರೊಡನೆ ಈ ಕೆಲಸಗಾರರನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಸಂಘದ ಅಧ್ಯಕ್ಷರು ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಈ ಪ್ರದೇಶದ ಸುತ್ತಮುತ್ತಲ ಗ್ರಾಮಪಂಚಾಯಿತಿ ಸದಸ್ಯರು, ತಾಲ್ಲೂಕು ಬೋರ್ಡು ಅಧ್ಯಕ್ಷರು ಹಾಜರಿದ್ದರು. ಡೆಪ್ಯೂಟಿ ಡೈರೆಕ್ಟರ್‌ರವರು ಎಲ್ಲರ ಮುಂದೆಯೂ ಈ ಕೆಲಸಗಾರರನ್ನು ತಾ. 25-5-79 ರೊಳಗೆ ಕೆಲಸಕ್ಕೆ ಹಿಂತೆಗೆದುಕೊಳ್ಳುವುದಾಗಿ ವಾಗ್ದಾನ ಮಾಡಿದರು. ನಂತರ ಕೆಲಸಗಾರರನ್ನುದ್ದೇಶಿಸಿ ಸಂಘದ ಅಧ್ಯಕ್ಷರಾದ ಕಾಂ. ಎ. ಎನ್. ಉಗ್ರಪ್ಪನವರು ಮತ್ತು ತಾಲ್ಲೂಕು ಬೋರ್ಡು ಅಧ್ಯಕ್ಷರಾದ ಶ್ರೀ ಎಸ್. ಶ್ರೀನಿವಾಸ್ ರವರು ತೀರ್ಮಾನಗಳನ್ನು ವಿವರಿಸಿ ಮಾತನಾಡಿದರು.

ಆದರೆ ತಾ. 16-5-79 ರಂದು ಕೆಲಸಗಾರರು ಮಾಮೂಲಿನಂತೆ ಕೆಲಸಕ್ಕೆ ಹೋದಾಗ ಇನ್ನೂ ನಾಲ್ಕು ಜನರನ್ನು ಕೆಲಸದಿಂದ ತೆಗೆದುಹಾಕಿರುವುದಾಗಿ ಅಧಿಕಾರಿಗಳು ಹೇಳಿದಾಗ ವಾದ ವಿವಾದ ನಡೆದು ಅಧಿಕಾರಿಗಳು ತೋಟವನ್ನು ಬಂದ್‌ಮಾಡಿ ಕೆಲಸಗಾರರನ್ನು ತಡೆಯಲು ಪೋಲೀಸರನ್ನು ತಂದು ರೇಷ್ಮೆ ತೋಟದಲ್ಲಿರಿಸಿಕೊಂಡಿದ್ದಾರೆ. ತಾ. 15-5-79ರ ಸಂಜೆಯೇ ಅಧಿಕಾರಿಗಳು ಹುಣಸೂರು ಪೋಲೀಸಿನವರಿಗೆ ಕೆಲವು ಕೆಲಸಗಾರರ ಮೇಲೆ ದೂರಿತ್ತು ಆಪಾದನೆಗಳನ್ನು ಹೊರಿಸಿ ಮೊಕದ್ದಮೆಗಳನ್ನು ಹೂಡಲು ಕ್ರಮ ಕೈಗೊಂಡಿರುವುದಾಗಿ ಕೆಲಸಗಾರರಿಗೆ ತಿಳಿದು ಬಂದಿದೆ.

ಈಗ ಎಲ್ಲ ಕೆಲಸಗಾರರು ಸುಮಾರು 300ಕ್ಕೂ ಹೆಚ್ಚು ಮಂದಿ ತಾ. 16-5-79 ರಿಂದಲೇ ಮುಷ್ಕರ ಪ್ರಾರಂಭಿಸಿದ್ದಾರೆ. ತೋಟದ ಬಳಿ ಎಲ್ಲೂ ನೀರು ನೆರಳು ಇಲ್ಲ. ದಿನವಿಡೀ ಕೆಲಸಗಾರರು ತೋಟದ ಬಳಿ ಸಭೆ ಸೇರುತ್ತಿದ್ದಾರೆ. ಅಲ್ಲದೆ ಗ್ರಾಮಗಳಿಗೆ ಪಾದಯಾತ್ರೆ ನಡೆಸುತ್ತಿದ್ದಾರೆ. ಕಾರ್ಮಿಕರಿಗಾಗಿ ಗಂಜಿ ಕೇಂದ್ರವನ್ನು ಪ್ರಾರಂಭಿಸಿದ್ದಾರೆ. ಈಗ ಕೆಲಸ ಕಳೆದುಕೊಂಡಿರುವ ಸುಮಾರು 21 ಮಂದಿಯನ್ನು ಕೆಲಸಕ್ಕೆ ಹಿಂತೆಗೆದುಕೊಳ್ಳುವವರೆವಿಗೂ ಮುಷ್ಕರವನ್ನು ನಿಲ್ಲಿಸುವುದಿಲ್ಲವೆಂದು ಅಂತಿಮ ತೀರ್ಮಾನ ಕೈಗೊಂಡಿದ್ದಾರೆ.

●

ಪಾಲಿಟ್‌ಬ್ಯೂರೋ ಮಂಡಿಸಿದ ಅಭಿಪ್ರಾಯ

[ಒಂದನೇ ಪುಟದಿಂದ]

ಗಳನ್ನು ಸರಿಪಡಿಸುವುದು ಸುಲಭದ ಕೆಲಸವಲ್ಲ. ಇದಕ್ಕೆ ಭಿನ್ನಾಭಿಪ್ರಾಯಗಳ ಬಗ್ಗೆ ವಿನಿಮಯಗಳು ನಿರಂತರವಾಗಿ ನಡೆದು, ಸಾಧ್ಯವಾದಲ್ಲೆಲ್ಲ ಐಕ್ಯ ಕಾರ್ಯಾಚರಣೆ ನಡೆಸುವ ಅನುಭವ ಅಗತ್ಯವಾಗುತ್ತದೆ.

(4) ನಮ್ಮ ಪ್ರಕಾರ, ಕಾಂಗ್ರೆಸ್ (ಐ) ಪ್ರತಿನಿಧಿಸಿದ ಸರ್ವಾಧಿಕಾರದ ವಿರುದ್ಧ ನಡೆಸುವ ಹೋರಾಟವು ಇನ್ನೂ ಮುಗಿದಿಲ್ಲ ಎಂಬುದನ್ನು ಸ್ಪಷ್ಟಪಡಿಸಲು ಇಚ್ಛಿಸುತ್ತೇವೆ. ಆದ್ದರಿಂದ ನಮ್ಮ ಕೆಲವು ಸ್ನೇಹಿತರು ಸಲಹೆ ಮಾಡುತ್ತಿರುವ ಹಾಗೆ, ಕಾಂಗ್ರೆಸ್ (ಐ) ನೊಡನೆ ಆರೆಸ್ಸೆಸ್ ವಿರೋಧಿ ರಂಗವನ್ನು ಸೇರುವ ಪ್ರಶ್ನೆಯೇ ನಮ್ಮ ಹತ್ತಿರ ಇಲ್ಲ. ತನ್ನ ಜಾತ್ಯಾತೀತ ವಿರೋಧಿ ಸಿದ್ಧಾಂತವನ್ನು ಜನತೆಯಲ್ಲಿ ತುಂಬಲು ಆಡಳಿತ ಯಂತ್ರದ ಮೇಲೆ ಅದಕ್ಕಿರುವ ಹಿಡಿತವನ್ನು ಉಪಯೋಗಿಸಿಕೊಳ್ಳಲು ಮತ್ತು ಅಲ್ಪಸಂಖ್ಯಾತರ ವಿರುದ್ಧ ಅದು ನಡೆಸುವ ಆಕ್ರಮಣಕಾರಿ ಚಟುವಟಿಕೆಗಳನ್ನು ಬಲಪಡಿಸಿಕೊಳ್ಳಲು ಆರೆಸ್ಸೆಸ್ ಯತ್ನಿಸುತ್ತಿದೆ. ಜನತಾಪಕ್ಷದೊಳಗೇ ಇದನ್ನು ತಡೆಯುವ ಪ್ರಯತ್ನಗಳು ನಡೆಯುತ್ತಿವೆ. ಕಾಂಗ್ರೆಸ್ (ಐ) ಪ್ರತಿನಿಧಿಸುವ ಸರ್ವಾಧಿಕಾರದ ವಿರುದ್ಧದ ಹೋರಾಟವನ್ನು ಕಡಿಮೆ ಮಾಡದೆ, ಈ ತಡೆಗಟ್ಟುವ ಪ್ರಯತ್ನವನ್ನು ಬಲಪಡಿಸುವುದು ನಮ್ಮ ಕೆಲಸವಾಗಬೇಕು.

(5) ಈ ಎಲ್ಲ ಅಂಶಗಳನ್ನು ಗಮನಿಸಿ, ಸಾಧ್ಯವಾದೆಡೆಯಲ್ಲೆಲ್ಲ ಐಕ್ಯ ಕಾರ್ಯಾಚರಣೆಯನ್ನು ನಡೆಸುವ ಪ್ರಯತ್ನವನ್ನು ಬಲಪಡಿಸುವುದು ಮತ್ತು ಭಿನ್ನಾಭಿಪ್ರಾಯಗಳಿರುವ ರಾಜಕೀಯ ವಿಚಾರಗಳ ಬಗ್ಗೆ ಮಾತುಕತೆ ಮುಂದುವರಿಸುವುದು ಇವುಗಳ ಬಗ್ಗೆ ನಮ್ಮ ಪ್ರಯತ್ನಗಳನ್ನು ನಡೆಸಬೇಕೆಂದು ನಾವು ಭಾವಿಸುತ್ತೇವೆ. ಆದರೆ ಐಕ್ಯಕಾರ್ಯಾಚರಣೆ ನಡೆಸುವಾಗ, ರಾಜಕೀಯ ಅಥವಾ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ವಿರುದ್ಧ ಹೋರಾಡುವ ವೇದಿಕೆಗಳನ್ನಾಗಿ ಈ ಐಕ್ಯಕಾರ್ಯಾಚರಣೆಗಳನ್ನು ಬಳಸಿಕೊಳ್ಳದಿರುವ ಹಾಗೆ ನಾವು ಎಚ್ಚರಿಕೆ ವಹಿಸಬೇಕು. ಅಂಥ ಐಕ್ಯಕಾರ್ಯಾಚರಣೆಯಲ್ಲಿ ಭಾಗವಹಿಸುವವರು, ಸರ್ವದಾ ಪರಸ್ಪರ ಸಲಹೆ ಪಡೆಯಬೇಕು, ಐಕ್ಯಕಾರ್ಯಾಚರಣೆಯನ್ನು ಬೆಳೆಸುವುದಕ್ಕೆ ಇರುವ ಕರಾರುಗಳು ಮತ್ತು ಅವನ್ನು ನಡೆಸಬೇಕಾದ ಸಂಗತಿಗಳ ಬಗ್ಗೆ ಒಪ್ಪಂದಕ್ಕೆ ಬರಬೇಕು. ಇದರಿಂದ ಐಕ್ಯಕಾರ್ಯಾಚರಣೆಯಲ್ಲಿ ಭಾಗವಹಿಸುವ ಪ್ರತಿಯೊಬ್ಬರೂ ಸುಯಮದಿಂದ ಇದ್ದು, ಒಪ್ಪಿತವಾದ ಸಂಗತಿಗಳನ್ನಷ್ಟೇ ಗಮನಿಸಬೇಕು ಎಂದಾಗುತ್ತದೆ. ತಮ್ಮ ಸ್ವಂತ ಅಭಿಪ್ರಾಯವನ್ನು ಐಕ್ಯವೇದಿಕೆಯಲ್ಲಿ ಹೇಳಲು ಯಾರಾದರೂ ಪ್ರಯತ್ನಿಸಿದರೆ, ಇತರರೂ ತಮ್ಮ ಸ್ವಂತ ಅಭಿಪ್ರಾಯಗಳನ್ನು ಹೇಳುವಂತೆ ಆಗುತ್ತದೆ (ಹಾಗಾದಾಗ ಐಕ್ಯವೇದಿಕೆಯು ಪರಸ್ಪರ ಕಚ್ಚಾಟದ ರಂಗವಾಗುತ್ತದೆ) ಅಥವಾ ಇತರರು ಮೌನದಿಂದಿರುವ ಹಾಗಾಗುತ್ತದೆ (ಎಂದರೆ ತಾವು ಒಪ್ಪದ ಅಭಿಪ್ರಾಯದ ಬಗ್ಗೆ ತಮ್ಮ ಅನ್ನಿಕೆಯನ್ನು ಹೇಳದೆ ಇರುವಂತಾಗುತ್ತದೆ.) ಐಕ್ಯಕಾರ್ಯಾಚರಣೆಗೆ ಅವಕಾಶಗಳು ವಿಶಾಲವಾಗಿರುವುದರಿಂದ ಮತ್ತು ಐಕ್ಯವೇದಿಕೆಯಲ್ಲಿ ಭಾಗವಹಿಸುವವರು ತಮ್ಮ ಸ್ವಂತ ಪ್ರಚಾರಕ್ಕಾಗಿ ಇದನ್ನು ಬಳಸಿಕೊಳ್ಳುವ ಪ್ರವೃತ್ತಿಯು ಬಲವಾಗಿರುವುದರಿಂದ, ಈ ವಿಚಾರದ ಬಗ್ಗೆ ನಮ್ಮಲ್ಲಿ ಪ್ರತಿಯೊಬ್ಬರೂ ಎಚ್ಚರಿಕೆ ವಹಿಸುವರೆಂದು ನಾವು ಆಶಿಸುತ್ತೇವೆ.

(6) ಸೈದ್ಧಾಂತಿಕ ಮತ್ತು ರಾಜಕೀಯ ಪ್ರಶ್ನೆಗಳ ಬಗ್ಗೆ ವಿವಿಧ ಪಕ್ಷಗಳು ತಳೆಯುವ ಸ್ವಂತ ನಿಲುವುಗಳಿಗೆ ಧಕ್ಕೆ ಬಾರದ ಹಾಗೆ, ಐಕ್ಯಕಾರ್ಯಾಚರಣೆಗಳನ್ನು ಬೆಳೆಸಬೇಕಾದ ವಿಚಾರಗಳನ್ನು ಈ ಅಭಿಪ್ರಾಯಗಳ ವಿನಿಮಯ ಕಂಡುಕೊಳ್ಳಬೇಕೆಂದು ನಾವು ಸೂಚಿಸುತ್ತೇವೆ. ○

ಬೈರಬಂಡ ಬಾಂಬ್ ಪ್ರಕರಣ

ಕೋಲಾರ ಜಿಲ್ಲಾ ಚಿಂತಾಮಣಿ ತಾಲ್ಲೂಕಿನ ಬೈರಬಂಡದಲ್ಲಿ ನಡೆದ ಘಟನೆಯನ್ನು ಉಪಯೋಗಿಸಿ ಅಲ್ಲಿಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡ ಕಾಂ. ಜಿ. ವಿ. ಅಶ್ವಥ್ ನಾರಾಯಣರೆಡ್ಡಿ ಮತ್ತು ಇತರ 21 ಮಂದಿಯ ಮೇಲೆ ರಾಜಕೀಯ ಒತ್ತಡದಿಂದ ಕೊಲೆ ಆಪಾದನೆಯ ಕೇಸು ಹಾಕಲಾಗಿತ್ತು. ಅಶ್ವಥ್‌ನಾರಾಯಣರೆಡ್ಡಿಯವರೂ ಸೇರಿದಂತೆ ಹಲವರನ್ನು ತಿಂಗಳುಗಟ್ಟಲೆ ಜೈಲಿನಲ್ಲಿ ಬಂಧಿಸಿಡಲಾಗಿತ್ತು. ಜಿಲ್ಲಾ ಸೆಶ್ಯನ್ಸ್ ಕೋರ್ಟಿನಲ್ಲಿ ವಿಚಾರಣೆ ನಡೆದು, ಆಪಾದಿತರ ಮೇಲಿನ ಆಪಾದನೆಗಳಿಗೆ ಆಧಾರವಿಲ್ಲವೆಂದೂ, ಇವರೆಲ್ಲರೂ ನಿರಪರಾಧಿಗಳೆಂದೂ ತೀರ್ಪು ದೊರೆತಿದ್ದು, ಬಂಧಿತರೆಲ್ಲರ ಬಿಡುಗಡೆಯಾಗಿದೆ. ಇಂದಿರಾ ಕಾಂಗ್ರೆಸ್ಸಿಗರ ಕುತಂತ್ರ ಮತ್ತು ಗೂಂಡಾ ರಾಜಕೀಯವು ಬಯಲಾಗಿದೆ.

ಐ.ಐ.ಎಂ. ನೌಕರರ ಸಂಘದ ಹೋರಾಟ

ಬೆಂಗಳೂರು ನಗರದಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟಿನ ನೌಕರರು ತಮ್ಮ ಬೇಡಿಕೆಗಳಿಗಾಗಿ ಬಹುದಿನಗಳಿಂದ ಹೋರಾಟ ನಡೆಸುತ್ತಿದ್ದಾರೆ. ಆದರೆ ಸಂಸ್ಥೆಯ ಆಡಳಿತವರ್ಗದವರು ಕಾರ್ಮಿಕವಿರೋಧಿ ನೀತಿಗಳಿಂದ ಈ ಹೋರಾಟವನ್ನು ಕಡೆಗಣಿಸುತ್ತಾ ಇದ್ದಾರೆ. ಕಾರ್ಮಿಕರ ಟ್ರೇಡ್‌ಯೂನಿಯನ್ ಪ್ರವೃತ್ತಿಯನ್ನೇ ಅವರು ಸಹಿಸುತ್ತಿಲ್ಲ. ಆದರೂ ನೌಕರರ ಸಂಘ ದಿಟ್ಟತನದಿಂದ ಹೋರಾಟ ನಡೆಸುತ್ತಿದೆ. ಸಂಘದ ನ್ಯಾಯಬದ್ಧ ಹೋರಾಟಕ್ಕೆ ದುಡಿಯುವ ಜನತೆಯ ನಾಗರಿಕರ ಬೆಂಬಲ ಅಗತ್ಯವಾಗಿದೆ. ○

ಚಿನ್ನದ ಗಣಿ ಕಾರ್ಮಿಕರಿಗೆ ಮುಂಗಡ ಹಣ

ಕೋಲಾರ ಜಿಲ್ಲೆಯ ಭಾರತ್ ಚಿನ್ನದ ಗಣಿ ಕಾರ್ಮಿಕರಿಗೆ ಅವರ ಮಕ್ಕಳ ವಿದ್ಯಾಭ್ಯಾಸದ ಖರ್ಚಿಗಾಗಿ 100 ರೂ. ಮುಂಗಡ ನೀಡುವ ಒಪ್ಪಂದವಾಗಿದ್ದು ಈ ಹಣವನ್ನು 1978ರ ಬೋನಸ್ ಹಣ ನೀಡಿದಾಗ ವಸೂಲು ಮಾಡಲಾಗುತ್ತದೆ. ಈ ಸಂಬಂಧವಾಗಿ ಚಿನ್ನದ ಗಣಿಯ ಮತ್ತು ಬಿಇಎಂಎಲ್‌ನ ಕಾರ್ಮಿಕರು ಆಡಳಿತ ವ್ಯವಸ್ಥೆ ಜೊತೆ ಕರಾರಿಗೆ ಸಹಿ ಹಾಕಿದ್ದಾರೆ. ○

ಹಳಿಯಾಳದಲ್ಲಿ ರೈತ-ಕೂಲಿಗಾರರ ಸಭೆ

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ ಸಮೀಪದ ಹಳ್ಳಿಯಲ್ಲಿ 21-5-79 ರಂದು ರೈತ-ಕೃಷಿಕೂಲಿಗಾರ ಮತ್ತು ಪೇಪರ್ ಮಿಲ್ಲಿನ ಕಾರ್ಮಿಕರ ಸಭೆಯು ಜರುಗಿತು. ಸಭೆಗೆ ಸಮೀಪದ ಹತ್ತು ಹಳ್ಳಿಗಳಿಂದ ಕಾರ್ಮಿಕರು ಮತ್ತು ರೈತ ಕೂಲಿಗಾರರು ಬಂದಿದ್ದರು. ಸಭೆಯಲ್ಲಿ ಹಳಿಯಾಳದ ಯುವಕ ಮುಂದಾಳು ಕಾಂ. ಉಡಚಪ್ಪಾ ಬೊಬಾಟಿ ಮತ್ತು ಕಾರ್ಮಿಕ ಮುಂದಾಳು ಕಾಂ. ಆರ್. ಜಿ. ಸ್ಥಳೇಕರ್‌ರವರು ಮಾತನಾಡಿದರು. ಸಭೆಯಲ್ಲಿ ಈ ಕೆಳಗಿನ ನಿರ್ಣಯಗಳನ್ನು ಮಾಡಿ, ನಿರ್ಣಯಗಳ ಜಾರಿಗಾಗಿ ಹೋರಾಡಲು ತೀರ್ಮಾನಿಸಲಾಯ್ತು.

1) ಪೇಪರ್ ಮಿಲ್ಲಿನ ಬಿದಿರು (ಬೊಂಬು) ಕಡಿಯುವ ಕಾರ್ಮಿಕರನ್ನು ಸರಕಾರವು ಪ್ಲಾಂಟೇಷನ್ ಕಾರ್ಮಿಕರೆಂದು ಪರಿಗಣಿಸಬೇಕು.

2) ಇವರಿಗೆ ಕನಿಷ್ಟ 8 ರೂ. ದಿನಕೂಲಿ ಸಿಗಬೇಕು.

3) ದೂರದಿಂದ ನಡೆದು ಹೋಗುವ ಕೂಲಿಗಾರರಿಗೆ ಪ್ರಯಾಣಕ್ಕೆ ಬಸ್ ವ್ಯವಸ್ಥೆ, ಔಷಧ ಉಪಚಾರ ಮೊದಲಾದ ಸವಲತ್ತು ಸಿಗಬೇಕು. ○

ಸಂಪಾದಕೀಯ

[ಒಂದನೇ ಪುಟದಿಂದ]

ಅನುಕೂಲವಲ್ಲ, ತಮಿಳುನಾಡನ್ನು ನಂಬುವುದು ಸಾಧ್ಯವಿಲ್ಲ. ಆಂಧ್ರರಾಜ್ಯಕ್ಕಿಂತ ಕರ್ನಾಟಕ ರಾಜ್ಯವೇ ಭದ್ರ ಎಂಬ ಲೆಕ್ಕಹಾಕಿ, ಒಳಜಗಳಕ್ಕೆ ತೇಪೆಹಾಕಿ ಚಿಕ್ಕಮಗಳೂರಿಂದ ಸ್ಪರ್ಧಿಸಲು ಇಂದಿರಾಗಾಂಧಿ ತೀರ್ಮಾನಿಸಿದರೆ ಆಶ್ಚರ್ಯವಿಲ್ಲ. ಫ್ಯಾಸಿಸ್ಟ್ ಕ್ರಮಗಳಿಂದ ರಾಜಕೀಯವನ್ನು ಬೀದಿಗೆಳೆಯಲು ಶ್ರಮಿಸುವ, ಸಂಜಯ ಗಾಂಧಿ ದುಷ್ಟಕೂಟವನ್ನು ಮತ್ತೆ ಮೇಲೆತ್ತಲು ಶ್ರಮಿಸುತ್ತಲಿರುವ, ತನ್ನ ಅಪಾರ ಅಪರಾಧಗಳಿಗಾಗಿ ಕಾನೂನು ಬೀಸುತ್ತಲಿರುವ ಬಲೆಯಿಂದ ತಪ್ಪಿಸಲು ಹೆಣಗಾಡುತ್ತಿರುವ ಸರ್ವಾಧಿಕಾರಿಣಿ ಇಂದಿರಾಗಾಂಧಿ ಮತ್ತೆ ಚಿಕ್ಕಮಗಳೂರಿಂದ ಸ್ಪರ್ಧಿಸಿ ಗೆಲ್ಲುವಂತಾಗದಂತೆ ಮಾಡುವುದಕ್ಕೆ ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳು ಎಚ್ಚೆತ್ತು ಶ್ರಮಿಸಬೇಕು. ○

ಆಗಸ್ಟ್ 20 ರಿಂದ ಪೌರಕಾರ್ಮಿಕರ ಮುಷ್ಕರ

20-5-79 ರಂದು ಸೇರಿದ ಕರ್ನಾಟಕ ರಾಜ್ಯ ಸ್ಥಳೀಯ ಸಂಸ್ಥೆಗಳ ನೌಕರರ ಮತ್ತು ಪೌರ ಕಾರ್ಮಿಕರ ಒಕ್ಕೂಟವು ನ್ಯಾಯಯುತವಾದ ಬೇಡಿಕೆಗಳನ್ನು ಪಡೆಯುವುದಕ್ಕಾಗಿ ಆಗಸ್ಟ್ 20ರಿಂದ ರಾಜ್ಯಾದ್ಯಂತ ಮುಷ್ಕರವನ್ನು ನಡೆಸಲು ಸರ್ವಾನುಮತದಿಂದ ನಿರ್ಣಯಿಸಿದೆ. ಈ ಬಗ್ಗೆ ಒಕ್ಕೂಟದ ಅಧ್ಯಕ್ಷ ಶ್ರೀ ಐ. ಡಿ. ಸಾಲಪ್ಪ, ಉಪಾಧ್ಯಕ್ಷ ಶ್ರೀ ಎನ್. ಕೆ. ಉಪಾಧ್ಯಾಯ, ಪ್ರಧಾನ ಕಾರ್ಯದರ್ಶಿ ಶ್ರೀ ಎಮ್. ಎನ್. ಉಗ್ರಪ್ಪನವರು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದರು. ನಿವೃತ್ತರಾದ ಪೌರ ಕಾರ್ಮಿಕರಿಗೆ ಪೆನ್ಶನ್, ಮತ್ತು ಗ್ರೆಚುಟಿ. ಪೌರಾಡಳಿತ ಸಿಬ್ಬಂದಿಗೆ ಪ್ರತ್ಯೇಕ ಇಲಾಖೆ. ಸೀನಿಯಾರಿಟಿ ಪ್ರಕಾರ ಭಡ್ತಿ, ಅಕ್ಟ್ರಾಯಿ ನೌಕರರನ್ನು ಪೌರ ಕೆಲಸಕ್ಕೆ ಸೇರಿಸಿಕೊಳ್ಳುವುದು ಇವೇ ಇತ್ಯಾದಿ ಬೇಡಿಕೆಗಳಿಗಾಗಿ ಅನಿರ್ಧಿಷ್ಟ ಮುಷ್ಕರ ನಡೆಸಲಾಗುವುದು ಎಂದೂ ಇವರುಗಳು ತಿಳಿಸಿರುವರು.

ಕಾರ್ಯಕಾರಿ ಸಮಿತಿಯು ರಾಜ್ಯ ಸರಕಾರಿ ನೌಕರರು ಡಿ. ಎ. ಪಡೆಯುವುದಕ್ಕಾಗಿ ಉಪವಾಸ ಸತ್ಯಾಗ್ರಹ ಮಾಡುವುದಕ್ಕೆ ಸಂಪೂರ್ಣ ಬೆಂಬಲ ಸೂಚಿಸಿತು. ಬೆಂಗಳೂರು ನಗರಾಡಳಿತ ಅಧಿಕಾರಿಗಳು ಶ್ರೀ ಸಾಲಪ್ಪನವರ ಮೇಲೆ ಇಲ್ಲದ ಸಲ್ಲದ ಆಪಾದನೆ ಮಾಡಿದ್ದನ್ನು ಖಂಡಿಸಲಾಯ್ತು. ಹುಕ್ಕೇರಿ, ಕೊಪ್ಪ ಮೊದಲಾದೆಡೆ ಪೌರಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಿದ್ದನ್ನು ಖಂಡಿಸಿ, ಕೂಡಲೇ ಅವರನ್ನು ಕೆಲಸಕ್ಕೆ ಸೇರಿಸುವಂತೆ ಮಾಡಲು ಸರಕಾರವನ್ನು ಒತ್ತಾಯಿಸಲಾಯಿತು.

ಪರಿಸರ

ಹಿಂದಿನ ಜನಸಂಘಕ್ಕೆ ಸೇರಿದ ಸದಸ್ಯರು ಮಾತ್ರ ಗೋಹತ್ಯೆ ನಿಷೇಧ ಮಸೂದೆಗೆ ಬೆಂಬಲ ನೀಡುತ್ತಿದ್ದುದು ಕಂಡುಬಂತು.

—ಸಂಸತ್ ಕಲಾಪವನ್ನು ವೀಕ್ಷಿಸಿದ 'ಪ್ರಜಾವಾಣಿ' ವರದಿಗಾರರು.

ಸಂಜಯಗಾಂಧಿಯನ್ನು ದೂಷಿಸುವುದರಿಂದ ಕಾಂಗ್ರೆಸ್ (ಐ) ಪಕ್ಷಕ್ಕೇ ಪೆಟ್ಟು ಜಾಸ್ತಿಬೀಳುತ್ತದೆ. ಮತ್ತು ಸಂಜಯಗಾಂಧಿ ಮಾಡಿರುವ ತಪ್ಪಾದರೂ ಏನು ?

—ಇಂದಿರಾಗಾಂಧಿ

ಯಾರ ಮಗ (ಮಕ್ಕಳು) ತಾನೆ ತಪ್ಪು ಮಾಡುವುದಿಲ್ಲ

—ದೇವರಾಜ ಅರಸು

ಕೇರಳದಲ್ಲಿ ಇತ್ತೀಚೆಗೆ ನಡೆದ ಉಪಚುನಾವಣೆಗಳ ಫಲಿತಾಂಶಗಳು ಅಲ್ಲಿನ ಸಂಯುಕ್ತರಂಗ ಸರ್ಕಾರದ ವಿರುದ್ಧ ಜನತೆಯು ನೀಡಿದ ತೀರ್ಪಾಗಿದೆ.

—ರಾಮಕೃಷ್ಣ ಹೆಗಡೆ
(ಜನತಾಪಕ್ಷದ ಪ್ರಧಾನ ಕಾರ್ಯದರ್ಶಿ)

'ಏರ್ ಇಂಡಿಯಾ' ಸಂಸ್ಥೆಯ ಅಧಿಕಾರಿಗಳು ದೇಶದ ಕೋಟ್ಯಾಂತರ ಬಡಜನತೆಯ ತೆರಿಗೆ ಹಣವನ್ನು ದೋಚಿ ಮಹಾರಾಜರ ಹಾಗೆ ಬದುಕುತ್ತಿದ್ದಾರೆ.

—ಸಾರ್ವಜನಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಂಸತ್ ಸಮಿತಿಯ ವರದಿಯಲ್ಲಿ 'ಶ್ರೀ ಜ್ಯೋತಿರ್‌ಮಯಿಬಸು'

ಪಕ್ಷ ರಾಜಕಾರಣಕ್ಕಾಗಿ ವಾರಕ್ಕೆರಡು ಮೂರು ಬಾರಿ ದಿಲ್ಲಿ-ಬೊಂಬಾಯಿ ಎಂದು ಸುತ್ತಾಡುವ ದೇವರಾಜ ಅರಸರು ಮುಖ್ಯಮಂತ್ರಿಗಳಾಗಿ ಅದೆಂತಹ ಕೆಲಸ ಮಾಡುತ್ತಿದ್ದಾರೆ ಎಂದು ಬಿಡಿಸಿ ಹೇಳಬೇಕಾಗಿಲ್ಲ.

—ಎಸ್. ಸೂರ್ಯನಾರಾಯಣರಾವ್
ಕರ್ನಾಟಕ ಸಿ.ಐ.ಟಿ.ಯು. ಅಧ್ಯಕ್ಷರು.

ವಿಚಾರಣೆಯನ್ನೆದುರಿಸುತ್ತಾ ಭಾರತದ ಜೈಲುಗಳಲ್ಲಿ ಕೊಳೆಯುತ್ತಿರುವ ಕೈದಿಗಳ ಸಂಖ್ಯೆ ಸುಮಾರು 1 ಲಕ್ಷ 70 ಸಾವಿರ. ಸಾಮಾನ್ಯವಾಗಿ ಸಣ್ಣಪುಟ್ಟ ಅಪರಾಧಗಳಿಗಾಗಿ ಬಂಧಿತರಾಗಿರುವ ಇವರುಗಳ ವಿಚಾರಣೆಯು ನಿಧಾನವಾಗಿ ಅವರಿಗೆ ನ್ಯಾಯವನ್ನೇ ನಿರಾಕರಿಸಲಾಗಿದೆ.

ಶ್ರೇಷ್ಠ ನ್ಯಾಯಾಲಯದ ನ್ಯಾಯವಾದಿ ಮತ್ತು ಮಾನವ ಹಕ್ಕುಗಳ ಹೋರಾಟಗಾರ್ತಿ ಕಪಿಲ ಹಿಂಗೋರಾಣಿ—
—'ಸಂಡೆ' ವಾರಪತ್ರಿಕೆಗೆ ಕೊಟ್ಟ ಸಂದರ್ಶನದಲ್ಲಿ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist). Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154